

No.MAG(3)/NPP/98/2023-2024

No.MAG(3)/NPP/99/2023-2024



ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂದನಸು

ಸ್ಥಾಪನೆ : ೧೯೭೯

ಹೊಂದನಸು-೧೩೨

ಸಂಪುಟ: ೧೪ ಸಂಚಿಕೆ: ೮ Volume: 14 Issue: 8 | ನವೆಂಬರ್ ೨೦೨೬ November 2026 | ಪುಟಗಳು-೮ Pages-8 | ವಾರ್ಷಿಕ ಚಂದಾ ರೂ.೨೦/- Annual Subscription Rs.20/- | ಶ್ರೀ ಪರಾಭವ ಸಂವತ್ಸರ ಆಶ್ವಯುಜ-ಕಾರ್ತಿಕ ಮಾಸ

ಪ್ರಕಾಶಕರು
ಬಿ.ಎಂ.ಶ್ರೀ. ಪ್ರತಿಷ್ಠಾನ

ಪ್ರಧಾನ ಸಂಪಾದಕರು
ಡಾ. ರಾಮೇಗೌಡ

ಸಂಪಾದಕರು
ಡಾ.ಎಸ್.ಎಲ್.ಮಂಜುನಾಥ್

ಬಿ.ಎಂ.ಶ್ರೀ. ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
ಏನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೨೨೪೧೧೧೨೨
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

ಕಛೇರಿ ಸಮಯ
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

ಚಂದಾ ವಿವರ
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

ಪ್ರೊ. ಎಂ.ವಿ. ಸೀತಾರಾಮಯ್ಯ
ಸಂಸ್ಥಾಪಕ
ಡಾ. ಆರ್. ಲಕ್ಷ್ಮೀನಾರಾಯಣ
ಗೌರವಾಧ್ಯಕ್ಷ

ಪದಾಧಿಕಾರಿಗಳು
- ಅಧ್ಯಕ್ಷ
  ಡಾ. ಬೈರಮಂಗಲ ರಾಮೇಗೌಡ
  ೯೩೪೧೨೫೮೪೧೨
- ಗೌರವ ಕಾರ್ಯದರ್ಶಿ
  ಡಾ. ಶಾಂತರಾಜು
  ೯೯೦೪೪೧೪೪೪೪
- ಗೌರವ ಕೋಶಾಧಿಕಾರಿ
  ಚಂದ್ರಶೇಖರ ನಾದೂರು
  ೯೯೪೫೦೦೪೪೪೬

ಸಂರಕ್ಷಕ
ಬಿ.ಎಸ್. ಗುರುಪ್ರಸಾದ್
ಹಸ್ತಪ್ರತಿ ವಿಭಾಗ

ಸಂಯೋಜಕ
ಡಾ. ಶಾಂತರಾಜು
ಎಂ.ವಿ.ಸೀ. ಸಂಶೋಧನಾ ಕೇಂದ್ರ

ಸಂಪಾದಕೀಯ

ಕನ್ನಡದ ಅಸ್ಮಿತೆಯನ್ನು ಉಳಿಸುವ ಸಂಕಲ್ಪ

ಕನ್ನಡವೆನ್ನುವುದು ಕೇವಲ ಒಂದು ಭಾಷೆಯಲ್ಲ. ಅದೊಂದು ಸಂಸ್ಕೃತಿ, ಪರಂಪರೆ, ಇತಿಹಾಸ ಮತ್ತು ನಮ್ಮೆಲ್ಲರ ಬದುಕಿನ ಅವಿಭಾಜ್ಯ ಅಂಗ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ, ಕನ್ನಡ ನಾಡು ತನ್ನ ಸಾಂಸ್ಕೃತಿಕ ಶ್ರೀಮಂತಿಕೆಯಿಂದ, ಸಾಹಿತ್ಯದ ಹಿರಿಮೆಯಿಂದ, ತಂತ್ರಜ್ಞಾನದ ತಿಳಿವಳಿಕೆಯಿಂದ, ರೈತರ ಪರಿಶ್ರಮದಿಂದ, ಕುಶಲಕರ್ಮಿಗಳ ಕೌಶಲ್ಯದಿಂದ ಜಗತ್ತಿನ ಗಮನ ಸೆಳೆದಿದೆ. ಇಂತಹ ಹೆಮ್ಮೆಯ ನಮ್ಮ ನಾಡು ನುಡಿ ಸಂಸ್ಕೃತಿಯನ್ನು ಸ್ಮರಿಸುವ ಸುದಿನವೇ ರಾಜ್ಯೋತ್ಸವ ಸಂಭ್ರಮ ದಿನ.

ಶ್ರೀವಿಜಯ, ಪಂಪ, ರನ್ನ, ಬಸವಣ್ಣ, ಕುಮಾರವ್ಯಾಸ, ಸರ್ವಜ್ಞ, ಬಿಎಂಶ್ರೀ, ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ ಹೀಗೆ ಅಸಂಖ್ಯಾತ ಮಹನೀಯರ ಸಾಹಿತ್ಯ ಕೃಷಿ ಕನ್ನಡದ ಸಾಂಸ್ಕೃತಿಕ ಚಿಂತನೆಗಳನ್ನು ಜಗತ್ತಿಗೆ ಪರಿಚಯಿಸಿದೆ. ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಹೆಗ್ಗಳಿಕೆಯೂ ಕನ್ನಡ ಸಾಹಿತ್ಯಕ್ಕಿದೆ. ಇಂತಹ ಭಾಷೆಯ ಮಕ್ಕಳೆಂಬ ಹೆಮ್ಮೆ ಪ್ರತಿಯೊಬ್ಬ ಕನ್ನಡಿಗನಲ್ಲೂ ಸದಾ ಜಾಗೃತವಾಗಿರಬೇಕು.

ಆದರೆ ಇಂದು ನಮ್ಮ ಮುಂದಿರುವ ಬಹುದೊಡ್ಡ ಸಂಗತಿ ದೈನಂದಿನ ಬದುಕಿನಲ್ಲಿ ಕನ್ನಡಕ್ಕೆ ಎಷ್ಟು ಆದ್ಯತೆ ನೀಡುತ್ತಿದ್ದೇವೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿರುವುದು. ಮನೆಗಳಲ್ಲಿ ಮಕ್ಕಳೊಂದಿಗೆ ಕನ್ನಡದಲ್ಲಿ ಮಾತನಾಡಲು ಹಿಂಜರಿಯುವ ಮನಸ್ಸು ಬದಲಾಗಬೇಕು. ಶಿಕ್ಷಣ, ಆಡಳಿತ, ವ್ಯಾಪಾರ, ತಂತ್ರಜ್ಞಾನ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಕನ್ನಡದ ಬಳಕೆ ಮತ್ತಷ್ಟು ವಿಸ್ತಾರಗೊಳ್ಳಬೇಕು.

ಇಂಗ್ಲಿಷ್ ಹಾಗೂ ಅನ್ಯಭಾಷೆಗಳನ್ನು ಕಲಿಯುವುದು ತಪ್ಪಲ್ಲ. ಜಾಗತಿಕ ಬಾಗಿಲು ತೆರೆಯಲು ಬಹುಭಾಷಾ ಸಾಮರ್ಥ್ಯ ಅನಿವಾರ್ಯ. ಆದರೆ ಅನ್ಯಭಾಷೆಗಳ ಕಲಿಕೆಯ ಭರದಲ್ಲಿ ನಮ್ಮ ನೆಲದ ಭಾಷೆಯನ್ನು ಕಡೆಗಣಿಸುವುದು ಮಾತ್ರ ಆತಂಕಕಾರಿ ಬೆಳವಣಿಗೆ. ಅನ್ಯಭಾಷೆಗಳನ್ನು ಗೌರವಿಸೋಣ, ನಮ್ಮ ಕನ್ನಡವನ್ನು ಕಡೆಗಣಿಸದಿರೋಣ.

ಕನ್ನಡ ರಾಜ್ಯೋತ್ಸವವೆಂದರೆ ಕನ್ನಡದ ಅಸ್ಮಿತೆಯನ್ನು ಉಳಿಸುವ ಸಂಕಲ್ಪದ ದಿನವಾಗಬೇಕು. ಕನ್ನಡವನ್ನು ಪ್ರೀತಿಸುವ, ಕನ್ನಡವನ್ನು ಬೆಳೆಸುವ ಮತ್ತು ಮುಂದಿನ ಪೀಳಿಗೆಗೆ ಕನ್ನಡದ ಶ್ರೀಮಂತ ಪರಂಪರೆಯನ್ನು ಪರಿಚಯಿಸುವ ಸಂಕಲ್ಪ ಮಾಡೋಣ.

ಕನ್ನಡ ನಮ್ಮ ಉಸಿರಾಗಲಿ, ಕನ್ನಡತನ ನಮ್ಮ ಬದುಕಾಗಲಿ.

–ಡಾ. ಎಸ್.ಎಲ್. ಮಂಜುನಾಥ್

ಅಕ್ಟೋಬರ್ ಮಾಹೆಯಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಕನ್ನಡ–ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ನಡೆದ ಕಾರ್ಯಕ್ರಮಗಳ ವರದಿ

ಶ್ರೀ ಬೇಟೆರಾಯ ದೀಕ್ಷಿತ್, ಪ್ರೊ. ಬಿ. ರಾಮಸ್ವಾಮಿ, ಎಸ್. ಶ್ರೀಕಂಠಯ್ಯ ಮತ್ತು ಶ್ರೀಮತಿ ಎಚ್.ವಿ. ಸಾವಿತ್ರಮ್ಮ ರಾಮಸ್ವಾಮಿ ಸಂಯುಕ್ತ ದತ್ತಿ ಕಾರ್ಯಕ್ರಮ ೦೭.೧೦.೨೦೨೬ ಬುಧವಾರ ಸಂಜೆ ೫–೦೦ ಗಂಟೆಗೆ

ವಿಷಯ: **ದಾಸಸಾಹಿತ್ಯಕ್ಕೆ ವಿಜಯದಾಸರ ಕೊಡುಗೆ**

ವಿಷಯ ಮಂಡನೆ: **ಪ್ರೊ. ಎಸ್.ಎಸ್. ರಮೇಶ್**

ಅಧ್ಯಕ್ಷತೆ : **ಡಾ. ಬೈರಮಂಗಲ ರಾಮೇಗೌಡ**

ಸಹಕಾರ : **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಹರಿದಾಸ ಸಾಹಿತ್ಯಕ್ಕೆ ವಿಜಯದಾಸರ ಕೊಡುಗೆ ಕುರಿತು **ಪ್ರೊ. ಎಸ್.ಎಸ್. ರಮೇಶ್** ಅವರು ವಿಚಾರವನ್ನು ಮಂಡಿಸುತ್ತಾ, "ಹರಿದಾಸ ಸಾಹಿತ್ಯವನ್ನು ಮೂರು ಆಯಾಮಗಳಲ್ಲಿ ನೋಡಬೇಕು. ಒಂದು ತತ್ವ, ಎರಡು ಸಾಹಿತ್ಯ, ಮೂರು ಸಂಗೀತ. ಈ ಮೂರು ಆಯಾಮಗಳಲ್ಲಿ ಹರಿದಾಸ ಸಾಹಿತ್ಯ ವಿಸ್ತಾರವಾದ, ಅಮೂಲ್ಯವಾದ ಕೊಡುಗೆಯನ್ನು ಕೊಟ್ಟಿದೆ. ಎಲ್ಲಾ ಹರಿದಾಸರುಗಳ ತಾತ್ವಿಕವಾದ ನಿಲುವು ಏನೆಂದರೆ ದ್ವೈತ ಸಿದ್ಧಾಂತದ ಪ್ರತಿಪಾದಕರಾದ ಶ್ರೀ ಮಧ್ವಾಚಾರ್ಯರು ಅವರ ಸಿದ್ಧಾಂತಗಳ, ವಿಚಾರಗಳ ಮೇಲೆ ಸಾಹಿತ್ಯ ಕೃಷಿಯನ್ನು ಮಾಡುವುದಾಗಿದೆ.

ಸಂಸ್ಕೃತ ವಿದ್ವಾಂಸರಾಗಿದ್ದರೂ ದಾಸಸಾಹಿತ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ ಆದ್ಯರು ಶ್ರೀಪಾದರಾಜರು. ಮುಳಬಾಗಿಲಿನ ಶ್ರೀಪಾದರಾಜರು ಹರಿದಾಸ ಸಾಹಿತ್ಯಕ್ಕೆ ಮೊದಲು ಅಡಿಪಾಯ ಹಾಕಿದವರು. ನಂತರದಲ್ಲಿ ಇವರ ಬಳಿ ಅಭ್ಯಾಸ ಮಾಡಿದ ವ್ಯಾಸರಾಯರು ಮತ್ತು ಸೋದೆಯ ವಾದಿರಾಜರು. ಈ ಮೂವರು ಸಂಸ್ಕೃತದಲ್ಲಿ ಶ್ರೇಷ್ಠ ವಿದ್ವಾಂಸರುಗಳಾಗಿದ್ದರೂ ಕನ್ನಡಕ್ಕೆ ಇವರ ಕೊಡುಗೆ ಅಪಾರವಾದುದು. ಮುಳಬಾಗಲಿನ ಮಠದಲ್ಲಿ ಪೂಜೆ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡಿದ್ದ ಶ್ರೀಪಾದರಾಜರು ದೇವರಿಗೆ ಪೂಜೆ ಮಾಡುವ ಸಂದರ್ಭದಲ್ಲಿ ಕೆಲವೇ ಕೆಲವರು ಸಂಸ್ಕೃತ ಶ್ಲೋಕಗಳನ್ನು ಹೇಳುತ್ತಿದ್ದರೆ, ನೂರಾರು ಭಕ್ತರು ಸುಮ್ಮನೆ ನಿಂತಿರುತ್ತಿದ್ದರು. ಅದನ್ನು ಕಂಡ ಶ್ರೀಪಾದರಾಜರು ಅಂದೇ ಕನ್ನಡದಲ್ಲಿ ಕೃತಿರಚನೆ ಮಾಡಬೇಕೆಂದು ನಿರ್ಧರಿಸುತ್ತಾರಂತೆ. ಹೀಗೆ ಹರಿದಾಸ ಸಂಕೀರ್ತನೆಗಳು ಹುಟ್ಟಿಕೊಂಡವು. "ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದಾ" ಎನ್ನುವಂತಹ ಅದ್ಭುತ ಕೀರ್ತನೆಗಳನ್ನು ರಚನೆ ಮಾಡಿದ್ದಾರೆ. ಇವರ ಶಿಷ್ಯರು ವ್ಯಾಸರಾಯರು. ವ್ಯಾಸರಾಯರು ಸಂಸ್ಕೃತದಲ್ಲಿ ಉದ್ಧಾಮ ಪಂಡಿತರು. ಮಠಾಧಿಪತಿಗಳಾಗಿದ್ದವರು. ವೈದಿಕ ಪರಂಪರೆಯ ಸಂಪ್ರದಾಯದ ಕಾಲಘಟ್ಟದಲ್ಲಿದ್ದ ವ್ಯಾಸರಾಯರು ಪುರಂದರದಾಸರನ್ನು, ಕನಕದಾಸರನ್ನು ಶಿಷ್ಯರನ್ನಾಗಿ ಸ್ವೀಕರಿಸಿ ಹರಿದಾಸ ಸಾಹಿತ್ಯಕ್ಕೆ ವಿಶೇಷವಾದ ಸ್ಥಾನವನ್ನು, ಅಸ್ತಿತ್ವವನ್ನು ಕಲ್ಪಿಸಿಕೊಟ್ಟವರು.

ವ್ಯಾಸರಾಯರು, ವಾದಿರಾಜರು, ಪುರಂದರದಾಸರು, ಕನಕದಾಸರುಗಳ ಕಾಲಘಟ್ಟ ಮುಗಿದ ನಂತರದಲ್ಲಿ ಸುಮಾರು ಎರಡು ಶತಮಾನಗಳ ಕಾಲದಲ್ಲಿ ಹರಿದಾಸ ಸಾಹಿತ್ಯ ನಿಂತೇಹೋಗುತ್ತದೆ ಎನ್ನುವ ಸಂದರ್ಭದಲ್ಲಿ ಆಗ ಮಂತ್ರಾಲಯದ ರಾಘವೇಂದ್ರಸ್ವಾಮಿಗಳಿಂದ ಪುನರುತ್ಥಾನಗೊಳ್ಳುತ್ತದೆ. ಇವರ ಒಂದೇ ಒಂದು ಕನ್ನಡ ಕೀರ್ತನೆ **'ಇಂದು ಎನಗೆ ಗೋವಿಂದ'** ಹೆಚ್ಚು ಜನಪ್ರಿಯವಾದುದು. ವ್ಯಾಸರಾಯರ ಪ್ರಭಾವ ಹರಿದಾಸರುಗಳ ಮೇಲೆ ದಟ್ಟವಾಗಿದ್ದರೂ, ಎರಡನೇ ಘಟ್ಟದಲ್ಲಿ ರಾಘವೇಂದ್ರಸ್ವಾಮಿಗಳ ಪ್ರಭಾವ, ಸ್ಫೂರ್ತಿಪ್ರಧಾನವಾಗಿ ಉಂಟಾಗುತ್ತದೆ.

ಹಾಗೇ ಪ್ರಭಾವಕ್ಕೆ ಒಳಗಾದ ಎರಡನೇ ಘಟ್ಟದ ಪ್ರಮುಖ ಹರಿದಾಸರೆಂದರೆ ವಿಜಯದಾಸರು. ಇವರು ಹರಿದಾಸ ಸಾಹಿತ್ಯಕ್ಕೆ ಕೊಟ್ಟಿರುವ ಕೊಡುಗೆಯನ್ನು ತಿಳಿಸುವುದೇ ಇವತ್ತಿನ ಉಪನ್ಯಾಸದ ವಿಶೇಷ. ಹರಿದಾಸ ಸಾಹಿತ್ಯ ಕ್ಷೇತ್ರದಲ್ಲಿ ವಿಜಯದಾಸರು ಅತ್ಯಂತ ಪ್ರಮುಖರು. ಒಂದು ಸಂಶೋಧನೆಯ ಪ್ರಕಾರ ಪುರಂದರದಾಸರ ಕೊನೆಯ ಮಗನೇ ವಿಜಯದಾಸರಾಗಿ ಜನಿಸಿದ್ದಾರೆಂದು ಹೇಳುತ್ತಾರೆ. ವಿಜಯದಾಸರು ಈ ಭೂಮಂಡಲದಲ್ಲಿದ್ದದ್ದು ಎಪ್ಪತ್ತೂರು ವರ್ಷಗಳು.





(೧೬೮೨–೧೭೫೫) ಪುರಂದರದಾಸರು ಕನಸಿನಲ್ಲಿ ಬಂದು ವಿಜಯದಾಸರಿಗೆ 'ವಿಜಯವಿಠಲ' ಎಂಬ ಅಂಕಿತವನ್ನು ನೀಡಿದರೆಂಬ ಪ್ರತೀತಿ ಇದೆ. ನಮ್ಮ ಹರಿದಾಸ ಪರಂಪರೆಯಲ್ಲಿ ಪುರಂದರದಾಸರು ಹೆಚ್ಚು ಕೀರ್ತನೆಗಳನ್ನು, ಸುಳಾದಿಗಳನ್ನು, ಉಗಾಭೋಗಗಳನ್ನು ರಚನೆ ಮಾಡಿದ್ದಾರೆಂದು ಇತಿಹಾಸ ಹೇಳಿದರೂ, ನಮಗೆ ಹೆಚ್ಚು ಲಭ್ಯವಾಗಿರುವಂತಹದು ವಿಜಯದಾಸರ ರಚನೆಗಳೆ. ವಿಜಯದಾಸರು ದಾಸಪರಂಪರೆಯಲ್ಲಿ ಒಂದು ಪಂಥವನ್ನು ನಿರ್ಮಾಣ ಮಾಡಿದವರು. ಸಾಂಪ್ರದಾಯಿಕ ಕಟ್ಟಳೆಗಳನ್ನು ಮಾನವೀಯತೆಯ ಆಧಾರದ ಮೇಲೆ ವಿರೋಧಿಸುತ್ತಾ, ಶುಷ್ಕ ಸಾಹಿತ್ಯಕ್ಕಿಂತ ಮಾನವೀಯತೆಗೆ ಹೆಚ್ಚು ಬೆಲೆ ಕೊಟ್ಟದ್ದು ವಿಜಯದಾಸರ ವೈಶಿಷ್ಟ್ಯ. ವಿಜಯದಾಸರ **'ಮನಸ್ಸು ನಿಲ್ಲಿಸುವುದು ಬಹಳ ಕಷ್ಟ, ನೀನ್ಯಾಕೋ ನಿನ್ನ ಹಂಗ್ಯಾಕೋ, ಹರಿಯ ನೆನೆಯುವ ದಿನವೇ ಸುದಿನ, ಜನನದ ಭಯ ಮರಣದ ಭಯ ಮನೋಇಂದ್ರಿಯಂಗಳು ವಿಷಯಕ್ಕೆರಗುವ ಭಯ, ಬಂದ ದುರಿತಗಳ ಕಳೆವುದೇ ಹಬ್ಬ, ಹಾಳು ಹರಟೆಗೆ ಹೋಗಬೇಡ'** ರಚನೆಗಳ ಕುರಿತು ಹಲವಾರು ಉದಾಹರಣೆಗಳ ಮೂಲಕ ವಿವರಿಸಿದರು. ವಿಜಯದಾಸರು ಬಹು ದೊಡ್ಡ ಸಾಗರ. ಅದರಲ್ಲಿ ಒಂದು ಹನಿಯನ್ನಷ್ಟೇ ತಮ್ಮೊಡನೆ ಹೇಳಿದ್ದೇನೆಂದು ತಮ್ಮ ಉಪನ್ಯಾಸವನ್ನು ಮುಗಿಸಿದರು.

ಡಾ. ಬೈರಮಂಗಲ ರಾಮೇಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ "ಎರಡನೇ ಹಂತದಲ್ಲಿ ಹರಿದಾಸ ಸಾಹಿತ್ಯವನ್ನು ಬಹು ಎತ್ತರಕ್ಕೆ ಕೊಂಡೊಯ್ದವರು ವಿಜಯದಾಸರು. ಮಾನ್ವಿ ಎಂಬ ಒಂದು ಹಳ್ಳಿಯಲ್ಲಿ ಜನಿಸಿ ಪುಣ್ಯಕ್ಷೇತ್ರಗಳಲ್ಲೆಲ್ಲ ಸಂಚರಿಸಿ ಅನುಭವಗಳನ್ನು ಗಳಿಸಿ ನಂತರ ಸಮಾಜದಲ್ಲಿ ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸಿದವರು. ಭೋಗದ ಕೊನೆಯ ಹಂತವೇ ವೈರಾಗ್ಯ. ಜೈನ ಸಾಹಿತ್ಯ ಕೃತಿಗಳಲ್ಲಿ ಈ ಸಿದ್ಧಾಂತವನ್ನು ಬಹಳ ಚೆನ್ನಾಗಿ ನಿರೂಪಿಸಿದ್ದಾರೆ. ವಿಜಯದಾಸರು ಅತ್ಯಂತ ಸರಳವಾಗಿ ಕನ್ನಡ ಕೀರ್ತನೆಗಳನ್ನು ರಚನೆ ಮಾಡಿದ್ದಾರೆ. ಆ ಎಲ್ಲಾ ಕೀರ್ತನೆಗಳನ್ನು ಸಿಕ್ಕಿರುವ ಕಡಿಮೆ ಅವಧಿಯಲ್ಲಿ ವಿವರಿಸಲು ಅಸಾಧ್ಯ. ಇದು ಕನ್ನಡಿಯಲ್ಲಿ ಆನೆಯನ್ನು ತೋರಿಸಿದಂತೆ ಆಗಿದೆ ಎಂದು ಪ್ರೊ. ರಮೇಶ್ ಅವರು ಹೇಳಿದ್ದಾರೆ. ಅವರಿಗೆ ಧನ್ಯವಾದಗಳು ತಿಳಿಸುತ್ತೇನೆ" ಎಂದು ಹೇಳಿದರು.

ಕಾರ್ಯಕ್ರಮದ ಆರಂಭದಲ್ಲಿ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಗುರುಪ್ರಸಾದ್ ಅವರು ದತ್ತಿಯ ವಿಶೇಷತೆಯನ್ನು ತಿಳಿಸಿದರು. ಕಾರ್ಯದರ್ಶಿ ಡಾ. ಶಾಂತರಾಜು ಉಪನ್ಯಾಸಕರನ್ನು ಸಭೆಗೆ ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು. ಕೋಶಾಧಿಕಾರಿ ಚಂದ್ರಶೇಖರ್ ನಾದೂರು ಅವರು ಕಾರ್ಯಕ್ರಮದ ಕೊನೆಯಲ್ಲಿ ಉಪನ್ಯಾಸಕರಿಗೆ, ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ಶ್ರೀ ಎಂ.ಎ. ರಾಮಾನುಜ ಅಯ್ಯಂಗಾರ್ ದತ್ತಿ ಕಾರ್ಯಕ್ರಮ
೧೪.೧೦.೨೦೨೬, ಬುಧವಾರ ಸಂಜೆ ೫–೦೦ ಗಂಟೆಗೆ

ವಿಷಯ: **ಶ್ರೀಕೃಷ್ಣ ಆಲನಹಳ್ಳಿ ಅವರ ಕಾವ್ಯ**

ವಿಚಾರ ಮಂಡನೆ: **ಡಾ. ಎಚ್.ಕೆ. ಮಳಲಿಗೌಡ**

ಅಧ್ಯಕ್ಷತೆ: **ಡಾ. ಬೈರಮಂಗಲ ರಾಮೇಗೌಡ**

ಸಹಕಾರ: **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಶ್ರೀ ಎಂ.ಎ. ರಾಮಾನುಜ ಅಯ್ಯಂಗಾರ್ ಹೆಸರಿನಲ್ಲಿ ನಡೆಯುತ್ತಿರುವ ೧೬ನೇ ದತ್ತಿ ಉಪನ್ಯಾಸ ಕಾರ್ಯಕ್ರಮ ಇದು ಎಂದು ದತ್ತಿಯ ಪರಿಚಯವನ್ನು ಕೋಶಾಧಿಕಾರಿ ಚಂದ್ರಶೇಖರ್ ನಾದೂರು ಅವರು ಸಭೆಗೆ ಪರಿಚಯಿಸುತ್ತಾ ಉಪನ್ಯಾಸ ಕಾರ್ಯಕ್ರಮಕ್ಕೆ ಪ್ರಾರಂಭ ನೀಡಿದರು. ನಂತರ ಕಾರ್ಯದರ್ಶಿ ಡಾ.ಶಾಂತರಾಜು ಉಪನ್ಯಾಸಕರಾದ ಡಾ. ಎಚ್.ಕೆ. ಮಳಲಿಗೌಡರನ್ನು ಸಭೆಗೆ ಪರಿಚಯಿಸುತ್ತಾ ಎಲ್ಲರನ್ನೂ ಗೌರವದಿಂದ ಸ್ವಾಗತಿಸಿದರು.

ವಿಷಯ ಮಂಡನೆ: **'ನಾವು ಬಲ್ಲವರಲ್ಲ ನಾವು ತಿಳಿದವರಲ್ಲ, ಯಾವ ತಪ್ಪಿದ್ದರೂ ಒಪ್ಪಿಕೊಳ್ಳಬೇಕು'** ಎನ್ನುವ ಜನಪದ ಗೀತೆಯ ಸಾಲುಗಳನ್ನು





ಸಭೆಯಲ್ಲಿ ಭಿನ್ನವಿಸಿ ಎಂ.ವಿ.ಸೀ.ಯವರನ್ನು ನೆನಪಿಸಿಕೊಂಡು ಕೃತಜ್ಞತೆಗಳನ್ನು ಸಲ್ಲಿಸಿ ಡಾ. ಬೈರಮಂಗಲ ರಾಮೇಗೌಡರು ಪ್ರತಿಷ್ಠಾನದ ಅಧ್ಯಕ್ಷರಾಗಿ ಬಂದ ನಂತರ ಪ್ರತಿಷ್ಠಾನದಲ್ಲಿ ನಿರಂತರವಾಗಿ ಕಾರ್ಯಕ್ರಮಗಳು ನಡೆದುಕೊಂಡು ಬರುವಂತಾಗಿದೆ, ಒಂದು ರೀತಿಯಲ್ಲಿ ಕಿಟಕಿ ಬಾಗಿಲುಗಳು ಪೂರ್ಣವಾಗಿ ತೆರೆದಂತಾಗಿದೆ ಎಂದು ಹೇಳಿ ಡಾ. ಎಚ್.ಕೆ. ಮಳಲಿಗೌಡರು ತಮ್ಮ ಉಪನ್ಯಾಸವನ್ನು ಪ್ರಾರಂಭಿಸಿದರು.

ಆಲನಹಳ್ಳಿಯ ಕಾವ್ಯ ಎಂದು ಶೀರ್ಷಿಕೆಯಿದ್ದರೂ, ಆಲನಹಳ್ಳಿಯವರ ಸಾಹಿತ್ಯವನ್ನು ನೋಡುವ ಕ್ರಮ ಹೇಗೆ? ಅವರ ಸಾಹಿತ್ಯವನ್ನು ಹೇಗೆ ಗ್ರಹಿಸಬೇಕು? ಎಂದು ಅವರ ಒಟ್ಟು ಸಾಹಿತ್ಯವನ್ನು ಕುರಿತು ಮಾತನಾಡುತ್ತೇನೆ. ಆಲನಹಳ್ಳಿ ಕೃಷ್ಣ ಎನ್ನುವಂತಹ ಲೇಖಕರನ್ನು ಕುರಿತಂತೆ ತುಂಬಾ ಚರ್ಚೆ ಆಗಬೇಕಿದೆ. ಆಲನಹಳ್ಳಿ ಅದ್ಭುತವಾದ ಲೇಖಕ. ಇವರನ್ನು ಕುರಿತು ಮಾತನಾಡಲು ಹೊರಟರೆ ಜನಪದ ಗೀತೆಯೊಂದು ನೆನಪಿಗೆ ಬರುತ್ತದೆ. "ಜವರಾಯ ಬರುವಾಗ ಬರಿಗೈಲಿ ಬರಲಿಲ್ಲ.....ಫಲವಿಟ್ಟ ಮರವನ್ನೇ ಕಡಿದುಕೊಂಡು ಹೊರಟ". ಇವರು ಬದುಕಿದ್ದದ್ದು ಕೇವಲ ೪೫ ವರ್ಷಗಳು. ಕೆಲವರ ಸಾವುಗಳನ್ನು ನೆನಪಿಸಿಕೊಳ್ಳುವುದು ತುಂಬಾ ಕಷ್ಟ. ವ್ಯಕ್ತಿತ್ವವನ್ನು ಸಾಹಿತ್ಯದಲ್ಲಿ ಹಿಡಿದು ಕಟ್ಟುವ ಅದ್ಭುತವಾದ ಗುಣ ಆಲನಹಳ್ಳಿಯವರಲ್ಲಿ ಇತ್ತು. ಅದನ್ನು ನಾನು ಪ್ರತ್ಯಕ್ಷವಾಗಿ ಕಂಡಿದ್ದೇನೆ. ಮಾಸ್ತಿಯವರು ತೀರಿಕೊಂಡಾಗ ಜಿಎಸ್ಸೆಸ್ ಅವರು ಏರ್ಪಡಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಆಲನಹಳ್ಳಿಯವರು ಬಂದಿದ್ದರು. ಸಭೆಯಲ್ಲಿದ್ದವರು ತಮ್ಮ ತಮ್ಮ ಮಾತುಗಳಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಿದರೆ, ಆಲನಹಳ್ಳಿಯವರು ಕವಿತೆಯ ಮೂಲಕ ಅರ್ಪಿಸಿದರು. ಅಲ್ಲಿ ಅವರು ಮಾಸ್ತಿಯವರನ್ನು ಕುರಿತು 'ಅಜ್ಜ ಕನ್ನಡ ಸಾಹಿತ್ಯಕ್ಕೆ ನೀನು ಕೊಟ್ಟದ್ದು ತಿಳಿಮಜ್ಜಿಗೆ' ಎಂದು ವಾಚಿಸಿದ ಕವಿತೆ ಇವತ್ತಿಗೂ ನನ್ನ ನೆನಪಿನಲ್ಲಿ ಉಳಿದಿದೆ ಎಂದರೆ ಅವರ ಕಾವ್ಯಶಕ್ತಿ ಎಂತಹದು ಎಂದು ಅರ್ಥವಾಗುತ್ತದೆ. ದೇವನೂರು ಮಹಾದೇವ ಅವರು ತುಂಬಾ ಕಡೆ ಆಲನಹಳ್ಳಿಯವರನ್ನು ಸ್ಮರಿಸುತ್ತಾರೆ. ಆಲನಹಳ್ಳಿಯವರನ್ನು ಕುರಿತು **'ಕೃಷ್ಣನಿಗೆ ಅರ್ಥವಾಗಿದ್ದು– ಕೃಷ್ಣನಿಗೆ ಅರ್ಥವಾಗದ್ದು'** ಎಂಬ ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಇವರಿಬ್ಬರ ಸ್ನೇಹ ಹೇಗಿತ್ತು ಎಂಬ ಅನೇಕ ವಿಷಯಗಳನ್ನು ಹೇಳಿದ್ದಾರೆ. ಆಲನಹಳ್ಳಿಯವರು ಸತ್ತಾಗ ದೇವನೂರವರು **'ನನ್ನ ಐವತ್ತು ಭಾಗ ಸತ್ತು ಹೋಯ್ತು'** ಎನ್ನುತ್ತಾರೆ. ಆಲನಹಳ್ಳಿಯವರ ಕುಟುಂಬ ದೇವರಾಜ ಅರಸ್ ಅವರ ಕುಟುಂಬಕ್ಕೆ ಬಹಳ ಹತ್ತಿರವಾಗಿತ್ತು. ಸ್ವತಃ ದೇವರಾಜ ಅರಸ್ ಅವರೇ ಇವರ ಹಲವು ಕೃತಿಗಳನ್ನು ಓದಿದ್ದರು, ಮೆಚ್ಚಿಕೊಂಡಿದ್ದರು. ಆಲನಹಳ್ಳಿಯವರು ಜಾತಿಯ ಬಗ್ಗೆ ಯಾವುದೇ ನಂಬಿಕೆಯನ್ನು ಇಟ್ಟುಕೊಂಡವರಲ್ಲ. ವಿದ್ಯಾರ್ಥಿಯಾಗಿದ್ದಾಗಲೇ ಕನ್ನಡ ನಾಡಿನ ಮನೆಮಾತಾಗಿದ್ದವರು. ಬಹುಮುಖ ಪ್ರತಿಭಾನ್ವಿತರು. ಸಣ್ಣಕಥೆ, ಕಾದಂಬರಿ, ಕವಿತೆ ಪ್ರಕಾರಗಳಲ್ಲಿ ತಮ್ಮ ಬರವಣಿಗೆಯನ್ನು ಮಾಡಿದ್ದಾರೆ. ವಿದ್ಯಾರ್ಥಿಯಾಗಿದ್ದಾಗಲೇ ಸಮೀಕ್ಷಕ ಎನ್ನುವ ಪತ್ರಿಕೆಯೊಂದನ್ನು ಪ್ರಾರಂಭಿಸುತ್ತಾರೆ. ಅವರ ಕವನಸಂಕಲನಗಳು ಮಣ್ಣಿನ ಹಾಡು, ಕಾಡುಗಿಡದ ಹಾಡುಪಾಡು, ಪ್ರಕಟಿಸಲಾಗದ ಪದ್ಯಗಳು. ಡೋಗ್ರಾ ಪಹಾರಿ ಪ್ರೇಮಗೀತೆಗಳು. ಮಣ್ಣಿನ ಹಾಡು ಪ್ರಕಟಗೊಂಡಾಗ ಅವರಿಗೆ ಹತ್ತೊಂಬತ್ತು ವರ್ಷ. ಪ್ರಕಟಗೊಂಡ ಆರಂಭದಲ್ಲೇ ಕನ್ನಡಿಗರ ಮನೆಮಾತಾದ ಈ ಕವನಸಂಕಲನ ಅಡಿಗರು, ಕೆ.ಎಸ್.ನರಸಿಂಹಸ್ವಾಮಿ, ಬೇಂದ್ರೆ ಇವರೆಲ್ಲರೂ ಮೆಚ್ಚಿಗೆಗೆ ಪಾತ್ರವಾಯಿತು. ಕಥಾಸಂಕಲನಗಳು ತಪ್ತ, ಫೀನಿಕ್ಸ್, ಗೀಜಗನ ಗೂಡು, ಕಾದಂಬರಿಗಳು ಪರಸಂಗದ ಗೆಂಡೆತಿಮ್ಮ, ಕಾಡು, ಭುಜಂಗಯ್ಯನ ದಶಾವತಾರ. ಇವೆಲ್ಲವೂ ಚಲನಚಿತ್ರಗಳಾಗಿಯೂ ಜನಪ್ರಿಯತೆಯನ್ನು ಗಳಿಸಿದಂತಹವು. ಇವರ ಮೊದಲ ಕವನಸಂಕಲನ ಮಣ್ಣಿನ ಹಾಡು ೧೯೬೬ರಲ್ಲಿ ಪ್ರಕಟಗೊಂಡದ್ದು, ಈ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಈ ಕೃತಿಗೆ ಅಡಿಗರು ಮುನ್ನುಡಿಯನ್ನು ಬರೆದಿದ್ದಾರೆ. ಅದರ ಕೊನೆಯಲ್ಲಿ ಅಡಿಗರು "ಈ ಕವನಗಳಲ್ಲಿ ಮಿಡಿಯುತ್ತಿರುವುದು ನಿಜವಾದ ತತ್ವ. ಕವಿಯೊಬ್ಬನ ಭಾಷೆಯಲ್ಲಿ ಕಾಣಿಸುವುದು ಬದುಕಿಗೆ ಹತ್ತಿರವಾದ ಜೀವಂತ ಭಾಷೆ, ಅನುಭವಗಳನ್ನು ಕೆತ್ತುವ ಕಡೆಯುವ ನಿಜವಾದ ಕಸುಬುಗಾರಿಕೆ. ಇಷ್ಟು ಶಕ್ತಿಯನ್ನು ಪಡೆದಿರುವ ಶ್ರೀಕೃಷ್ಣ ಇನ್ನೂ ಉತ್ತಮ ಕವಿತೆಗಳನ್ನು ಬರೆಯಲಿ" ಎಂದಿದ್ದಾರೆ. ನವೋದಯ ಕಾವ್ಯದ ನಡಿಗೆಗಳನ್ನು, ನವ್ಯದ ನೆಲೆಯನ್ನು, ಮಣ್ಣಿನ ಸೊಗಡನ್ನು ಸೇರಿಸಿ ಕವಿತೆ ಕಟ್ಟುವ ಶಕ್ತಿ ಆಲನಹಳ್ಳಿಯವರಲ್ಲಿ ಅಗಾಧವಾಗಿತ್ತು. ಹೀಗಾಗಿ ಅಡಿಗರಂತಹವರೂ ಇವರ ಬರವಣಿಗೆಯನ್ನು ತುಂಬಾ ಮೆಚ್ಚಿಕೊಂಡಿದ್ದರು. ಇವರ ಪ್ರತಿಜ್ಞೆ ಎನ್ನುವ ಕವಿತೆಯಲ್ಲಿ 'ಜೊಳ್ಳು ಕಾವ್ಯವ ರಚಿಸಿ ಬಳ್ಳ ಬಳ್ಳ ನಿನಗೆ ಕೊಡಲಾರೆ' ಎಂದು ನಾನು ಏನನ್ನು ಬರೀತಿನಿ ಎನ್ನುವುದನ್ನು ಕುರಿತು ಮಾತನಾಡಿದ್ದಾರೆ. ಮತ್ತೊಂದು ಕವಿತೆ ಸಂಜೆಯನ್ನು ಕುರಿತು ವರ್ಣಿಸಿರುವಂತಹದ್ದು, ನಮಗೆಲ್ಲ ಆಶ್ಚರ್ಯವನ್ನುಂಟು ಮಾಡುವಂತಹದ್ದು. ಸಂಜೆಯನ್ನು ಒಬ್ಬ ಮುದಿ ಸೂಳೆಗೆ ಹೋಲಿಸಿ ರಚನೆ ಮಾಡಿದ್ದಾರೆ. ಇವರ ಕವಿತೆಗಳಲ್ಲಿ ಹೆಚ್ಚು ಚರ್ಚೆಗೆ ಒಳಗಾದ ಪದ್ಯ ಬೆಳಗು. ಬೆಳಗನ್ನು ಕುರಿತು ಬೇಂದ್ರೆಯವರೂ ರಚನೆ ಮಾಡಿದ್ದಾರೆ. ಕುವೆಂಪು ಶರತ್ಕಾಲದಲಿ ಸೂರ್ಯೋದಯದಲಿ ಕವಿತೆ ರಚನೆ ಮಾಡಿದ್ದಾರೆ. ಆದರೆ ಆಲನಹಳ್ಳಿಯ ಬೆಳಗು ಅವರೆಲ್ಲರ ಕವಿತೆಗಳಿಗಿಂತ ತೀರ ಭಿನ್ನವಾದುದು. ಈ ಕವಿತೆ ತಲ್ಲಣವನ್ನೇ ಸೃಷ್ಟಿಸುತ್ತದೆ. ಈ ರೀತಿಯ ಶ್ರೇಷ್ಠವಾದ ಕವಿತೆಗಳನ್ನು, ಸಾಹಿತ್ಯವನ್ನು ಕೊಟ್ಟವರು ಶ್ರೀಕೃಷ್ಣ ಆಲನಹಳ್ಳಿಯವರು ಎನ್ನುತ್ತಾ ಅವಕಾಶವನ್ನು ನೀಡಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿ ತಮ್ಮ ವಿಚಾರ ಮಂಡನೆಯನ್ನು ಮುಗಿಸಿದರು.

ಡಾ.ಬೈರಮಂಗಲ ರಾಮೇಗೌಡರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಮಳಲಿಗೌಡರು ಆಲನಹಳ್ಳಿಯವರ ಕಾವ್ಯಕ್ಕೆ ಸಂಬಂಧಪಟ್ಟಂತೆ ಪುಸ್ತಕಗಳ ಹುಡುಕಾಟ ಮಾಡ್ತಾ ಇದ್ದರು. ಪುಸ್ತಕಗಳು ಅಷ್ಟು ಸುಲಭವಾಗಿ ಸಿಗುವ ಸಾಧ್ಯತೆಗಳು ಇಲ್ಲ ಎಂದು ಗೊತ್ತಾಗಿ, ಈ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತು ನನಗೆ ಒಪ್ಪಿಸಿದ್ದ ಕೆಲಸವನ್ನು ಮಾಡುವಾಗ ಅಲ್ಲಿ ಶ್ರೀಕೃಷ್ಣ ಆಲನಹಳ್ಳಿಯವರ ಕೆಲವು ಪುಸ್ತಕಗಳನ್ನು ಗ್ರಂಥಾಲಯದಲ್ಲಿ ಗಮನಿಸಿದ್ದೆ. ಆ ಆಧಾರದ ಮೇಲೆ ಅಲ್ಲಿ ಲಭ್ಯವಾಗುತ್ತದೆ ಎಂಬ ಮಾಹಿತಿಯನ್ನು ಕೊಟ್ಟೆ. ಆಲನಹಳ್ಳಿಯವರು ಕೇವಲ ೧೫ ವರ್ಷಗಳ ಅವಧಿಯಲ್ಲಿ ಕಥೆ ಕಾದಂಬರಿ ಕವಿತೆಗಳನ್ನು ರಚನೆ ಮಾಡಿ ಹೆಚ್ಚು ಜನಪ್ರಿಯವಾಗಿದ್ದವರು. ವಿಶೇಷವಾಗಿ ಆ ದಿನಗಳಲ್ಲಿ ಅವರ ರಚನೆಯ ಕಥೆ ಕಾದಂಬರಿಗಳನ್ನು ಓದುವುದಕ್ಕೆ ತರುಣ ತರುಣಿಯರು ತುಂಬಾ ಹುಚ್ಚು ಹಿಡಿಸಿಕೊಂಡಿದ್ದರು. ಆಸ್ಫೋಟಕವಾದ ಗುಣವನ್ನು ತಮ್ಮ ಕಥೆ ಕಾದಂಬರಿಗಳಲ್ಲಿ ತರುವುದು ಅವರ ಬರವಣಿಗೆಯ ಬಹು ಮುಖ್ಯವಾದ

ವೈಶಿಷ್ಟ್ಯ. ಇದರಿಂದ ಜನ ಹುಚ್ಚೆದ್ದು ಅವರ ಕೃತಿಗಳನ್ನು ಓದುತ್ತಿದ್ದರು. ಇವರಿಂದ ಇನ್ನೂ ಮಹತ್ವ ಕೃತಿಗಳು ಬರುತ್ತವೆ ಎಂದು ನಿರೀಕ್ಷೆಯಲ್ಲಿದ್ದಾಗಲೇ ದಿಢೀರನೆ ಕಣ್ಮರೆಯಾಗುತ್ತಾರೆ. ಓದುವಾಗ ನಮ್ಮ ಗಮನವನ್ನು ಕೇಂದ್ರೀಕರಿಸಿದರೆ ಮಾತ್ರವೇ ಆಲನಹಳ್ಳಿಯವರ ಬರವಣಿಗೆಯನ್ನು ಹಿಡಿದುಕೊಳ್ಳಲು ಸಾಧ್ಯ. ಒಮ್ಮೆ ಅವರ ಭಾಷಾ ಪ್ರಯೋಗವನ್ನು ಒಗ್ಗಿಸಿಕೊಂಡುಬಿಟ್ಟರೆ ರಸವತ್ತಾಗಿ ಆಸ್ವಾಧಿಸುವ ಗುಣ ಬಂದುಬಿಡುತ್ತದೆ. ಇವರ ಬರವಣಿಗೆಯಲ್ಲಿ ಬಂದ ಐದು ಕಥೆ, ಕಾದಂಬರಿಗಳು ಚಲನಚಿತ್ರಗಳಾಗಿದ್ದು ಸಿನಿಮಾರಂಗಕ್ಕೆ, ಸಾಹಿತ್ಯ ರಂಗಕ್ಕೆ ಕೊಟ್ಟಿರುವ ಕೊಡುಗೆಯನ್ನು ಎಂದೂ ಮರೆಯಲು ಸಾಧ್ಯವಿಲ್ಲ" ಎಂದು ತಿಳಿಸುತ್ತಾ ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡಿ, ಇಂದಿನ ವಿಷಯ ಮಂಡಕರಾಗಿದ್ದ ಡಾ. ಮಳಲಿಗೌಡರಿಗೆ ಧನ್ಯವಾದಗಳನ್ನು ತಿಳಿಸಿ ಅಭಿನಂದಿಸಿದರು. ಅಂತ್ಯದಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯ ಡಾ. ರಾಮಲಿಂಗೇಶ್ವರ (ಸಿಸಿರಾ) ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಶ್ರೀಮತಿ ಸುಶೀಲಾ ವಾಸುದೇವರಾವ್ ಹಳದೀಪುರ ವಾಸುದೇವರಾವ್ ದತ್ತಿ ಕಾರ್ಯಕ್ರಮ
೧೫.೧೦.೨೦೨೬, ಗುರುವಾರ ಸಂಜೆ: ೫–೦೦ ಗಂಟೆಗೆ

ವಿಷಯ: **ಚಿದಾನಂದ ಅವಧೂತರ 'ಜ್ಞಾನಸಿಂಧು'**

ವಿಷಯ ಮಂಡನೆ: **ಡಾ. ಮಲ್ಲೇಪುರಂ ಜಿ. ವೆಂಕಟೇಶ್**

ಅಧ್ಯಕ್ಷತೆ: **ಪ್ರೊ. ಜಿ. ಅಶ್ವತ್ಥನಾರಾಯಣ**

ಸಹಕಾರ: **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಡಾ.ಮಲ್ಲೇಪುರಂ.ಜಿ.ವೆಂಕಟೇಶ್ ಅವರು ಚಿದಾನಂದ ಅವಧೂತರ 'ಜ್ಞಾನಸಿಂಧು' ಕೃತಿಯನ್ನು ಕುರಿತು ಉಪನ್ಯಾಸವನ್ನು ನೀಡುವ ಮೊದಲು 'ಗುರುವರನೇ ಗುರುಮೂರ್ತಿ ದಯಾಸಾಗರನೇ ನಿರ್ಮಲ ನಿಷ್ಕಳಂಕನೇ ಪರಮಪೂರ್ಣಜ್ಯೋತಿ ಆತ್ಮಜ್ಯೋತಿ ಆತ್ಮೇಶ ದುರಿತ ದಾವಾನಳನೇ ಎನ್ನಯ ದರುಶ ಮಾನಸಮೂರ್ತಿ ತೇಜೋಭರಿತನು ಚಿದಾನಂದ ಗುರು ಮಾಳ್ಕೆ ಎನ್ನಯ ಮಂಗಳವಾ' ಎಂದು ಗುರುಗಳನ್ನು ಕುರಿತು ಪ್ರಾರ್ಥಿಸಿದರು. ನಂತರ ಮಾತನಾಡುತ್ತ, ಹದಿನೈದು ವರ್ಷಗಳಿಂದ ಯಾವುದೇ ದತ್ತಿ ಉಪನ್ಯಾಸಗಳನ್ನು ಒಪ್ಪಿಕೊಂಡಿರಲಿಲ್ಲ. ಈಗ ಪ್ರಿಯ ವಾಸುದೇವರಾವ್ ಅವರ ಒತ್ತಾಸೆ, ಪ್ರೀತಿ ಹಾಗೂ ಆಗ್ರಹದ ಮೇರೆಗೆ ಇವತ್ತಿನ ದತ್ತಿ ಉಪನ್ಯಾಸವನ್ನು ನೀಡಲು ಬಂದಿದ್ದೇನೆ. ಅವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದು ಹೇಳಿದರು.

ಚಿದಾನಂದ ಅವಧೂತರನ್ನು ಕುರಿತು ಕನ್ನಡದಲ್ಲಿ ಹೆಚ್ಚು ಬರವಣಿಗೆಗಳು ಬಂದಿಲ್ಲ. ರಂ.ಶ್ರೀ.ಮುಗಳಿಯವರ ಸಾಹಿತ್ಯ ಚರಿತ್ರೆಯಲ್ಲಿ ಐದು ವಾಕ್ಯಗಳಲ್ಲಿ ಇವರ ಪರಿಚಯವಿದೆ. ಬೆಂಗಳೂರು ವಿಶ್ವವಿದ್ಯಾಲಯ ತಂದಿರುವ ಸಮಗ್ರ ಸಾಹಿತ್ಯ ಚರಿತ್ರೆಯಲ್ಲಿ ಒಂದು ಪುಟದಷ್ಟು ವಿವರವಿದೆ.



ಬೇರೆ ಬೇರೆ ವಿಷಯಗಳನ್ನು ಕುರಿತು ಚರ್ಚೆ ಮಾಡುವಾಗ ಕೆಲವರು ಜ್ಞಾನಸಿಂಧುವಿನ ಬಗ್ಗೆ ಮಾತನಾಡಿರಬಹುದು. ಕನ್ನಡದಲ್ಲಿ ಇವರನ್ನು ಕುರಿತು ವಿಶೇಷ ಅಧ್ಯಯನಗಳಿಗೆ ಇದುವರೆಗೆ ಯಾರೂ ತೊಡಗಿಲ್ಲ. ಚಿದಾನಂದ ಅವಧೂತರು ವೇದಾಂತದ ಹಿನ್ನೆಲೆಯುಳ್ಳವರು. ಜೊತೆಗೆ ತಮ್ಮ ಕಾವ್ಯವನ್ನು ಭಾಮಿನೀ ಷಟ್ಪದಿಯಲ್ಲಿ ರಚನೆ ಮಾಡಿದ್ದಾರೆ. ಅವರಿದ್ದದ್ದು ಕಂಪ್ಲಿಯ ಬಳಿ. ಇವರ ಗುರುಗಳು ಚಿದಾನಂದರು. ಇವರನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಹಲವು ರೀತಿಯಲ್ಲಿ ಪರೀಕ್ಷೆಗಳಿಗೆ ಒಡ್ಡಿ ಕಡೆಯಲ್ಲಿ ಜ್ಞಾನಮಾರ್ಗ, ಯೋಗಮಾರ್ಗಗಳನ್ನು ತಿಳಿಸಿಕೊಡುತ್ತಾರೆ. ದೀಕ್ಷೆಗೆ ಒಳಗಾದಾಗ ಇವರಿಗೆ ಚಿದಾನಂದ ಅವಧೂತ ಎಂದು ನಾಮಕರಣವಾಗುತ್ತದೆ. ಆ ಹಿನ್ನೆಲೆಯಲ್ಲಿ ಇದುವರೆಗೂ ಯಾರೂ ಅಧ್ಯಯನ ಮಾಡಿಲ್ಲದೆ ಇರಬಹುದು. ಒಮ್ಮೆ ನನಗೆ ಜ್ಞಾನಸಿಂಧುವನ್ನು ನೋಡುವ ಅವಕಾಶ ಉಂಟಾಯಿತು. ಆಗ ನನಗನ್ನಿಸಿದ್ದು ವೇದಾಂತದ ಹಿನ್ನೆಲೆಯುಳ್ಳ ಇದು ಎಂತಹ ಮಹತ್ವದ ಕೃತಿಯೆಂದು. ಜ್ಞಾನಮಾರ್ಗವನ್ನು ಇರಿಸಿಕೊಂಡು ಯೋಗಮಾರ್ಗವನ್ನು ಸಂಕಲಿಸಿದ್ದಾನೆ. ಯೋಗಸೂತ್ರದಲ್ಲಿ ಏನನ್ನು ಹೇಳಿದೆಯೋ ಅದನ್ನು ಹಿನ್ನೆಲೆಯಾಗಿಟ್ಟುಕೊಂಡು ಕೃತಿಯನ್ನು ರಚನೆ ಮಾಡಿದ್ದಾನೆ. ಈತನಿದ್ದ ಕಾಲಘಟ್ಟದಲ್ಲಿ ಇಂತಹ ಅನೇಕ ಸಾಧಕರು ಇದ್ದಿರಬೇಕು. ಅವರೊಟ್ಟಿಗೆ ಈತ ಏನೇನು ಅಭ್ಯಾಸ ಮಾಡಿದ್ದನೋ? ಆ ಕಾರಣದಿಂದ ಜ್ಞಾನಯೋಗ ಭಕ್ತಿಯೋಗ ಕರ್ಮಯೋಗ ಇದರೊಂದಿಗೆ ಈತ ಹಠಯೋಗವನ್ನು ಸೇರಿಸಿ ಮಹಲಿಂಗರಂಗನ ಅನುಭವಾಮೃತಕ್ಕಿಂತ ವಿಸ್ತೃತವಾಗಿ ತನ್ನ ಕೃತಿಯನ್ನು ರಚನೆ ಮಾಡಿದ್ದಾನೆ. ಇಂತಹದೊಂದು ಕೃತಿ ರಚನೆ ಮಾಡಬೇಕಾದರೆ ಮೂರು ಮಾರ್ಗಗಳು ಔಚಿತ್ಯ. ಒಂದು ಶಾಸ್ತ್ರ ಮಾರ್ಗ, ಎರಡನೆಯದು ಗುರುಮಾರ್ಗ, ಮೂರನೆಯದು ಅನುಭವ ಮಾರ್ಗ. ಇವುಗಳನ್ನು ಅನುಸರಿಸಿದರೂ ಈತ ಸ್ವತಂತ್ರವಾದ ದಾರಿಗಳನ್ನು ಕಂಡುಕೊಂಡು ತನ್ನ ಕೃತಿಯನ್ನು ರಚನೆ ಮಾಡಿದ್ದಾನೆ. ಹೀಗಾಗಿ ನನಗೆ ಮಹಲಿಂಗರಂಗ ಮತ್ತು ನಿಜಗುಣ ಶಿವಯೋಗಿಗಳ ಕೃತಿಗಳಿಗಿಂತ ಜ್ಞಾನಸಿಂಧು ಹೆಚ್ಚು ಮಹತ್ವವುಳ್ಳ ಕೃತಿಯೆಂದು ಅನಿಸಿದೆ. ಅಲ್ಲದೆ ಕನ್ನಡದಲ್ಲಿ ಈ ಪರಂಪರೆಯ ಕೊನೆಯ ವ್ಯಕ್ತಿ ಚಿದಾನಂದ ಅವಧೂತರು. ಚಿದಾನಂದ ಅವಧೂತರನ್ನು ಸ್ಥಳೀಯರು ಕರೆಯುತ್ತಿದ್ದದ್ದು ಕೊಂಡಪ್ಪ, ಕೊಂಡಾರಯ್ಯ ಎಂದು. ಇವರ ಮಠವನ್ನು ಕೊಂಡಾರಯ್ಯರ ಮಠ ಎಂದು ಕರೆಯುತ್ತಿದ್ದರು. ಹೀಗೆ ಯಾಕೆ ಕರೆಯುತ್ತಿದ್ದರೋ ಗೊತ್ತಿಲ್ಲ.

ಸರ್ವತತ್ವವ ತಿಳಿಕೊಳ್ಳಿ ಎಂದು ಜ್ಞಾನಸಿಂಧುವಿನ ಆರಂಭದಲ್ಲಿ ತಿಳಿಸಿದ್ದಾನೆ. ಉಪನಿಷತ್ತುಗಳಲ್ಲಿ ಏನನ್ನು ಹೇಳಿದೆಯೋ ಅದನ್ನು ವಿಸ್ತರಿಸಿ ಹೇಳಿದ್ದೇನೆಂದು ತಿಳಿಸಿದ್ದಾನೆ. ಜ್ಞಾನಸಿಂಧು ಕಾವ್ಯ ಒಂದು ಬೃಹತ್ ಕಾವ್ಯ. ೪೯ ಪ್ರಕರಣಗಳಿವೆ. ಭಾಮಿನಿ ಷಟ್ಪದಿಯಲ್ಲಿ ೩೬೦೦ ಪದ್ಯಗಳಿವೆ. ಈ ಕೃತಿಯಲ್ಲಿ ಅನೇಕ ಸ್ವಾರಸ್ಯಕರ ವಿಚಾರಗಳಿವೆ. ವೇದಾಂತದ ಸಮಸ್ತ ಪರಿಚಯ ಬೇಕು ಎನ್ನುವುದಾದರೆ ಈ ಕೃತಿಯೊಳಗೆ ಪ್ರವೇಶ ಮಾಡಬಹುದು. ಪಂಚಕೋಶಗಳನ್ನು ಕುರಿತು ಹೇಳಿದ್ದಾನೆ. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎಂಬ ಐದು ಕೋಶಗಳನ್ನು ಕುರಿತು ಹೇಳಿದ್ದಾನೆ, ವಿದ್ಯೆ ಬಗ್ಗೆ ಹೇಳಿದ್ದಾನೆ, ಅವಿದ್ಯೆ ಬಗ್ಗೆ ಹೇಳಿದ್ದಾನೆ, ಚತುಷ್ಟಯಗಳ ಬಗ್ಗೆ ಹೇಳಿದ್ದಾನೆ. ಹಠಯೋಗದ ಬಗ್ಗೆಯೂ ಹೇಳಿದ್ದಾನೆ. ಒಬ್ಬ ಸಾಧಕನಾಗಬೇಕಾದರೆ ಪತಂಜಲಿಯವರು ತಿಳಿಸಿರುವ ಅಷ್ಟಾಂಗಯೋಗ ಮಾರ್ಗವಷ್ಟೇ ಸಾಲದು ಎಂದು ಅದರೊಟ್ಟಿಗೆ ಇನ್ನೂ ಹಲವನ್ನು ಸೇರಿಸಿ ಒಟ್ಟು ಹದಿನೈದು ಮೆಟ್ಟಿಲುಗಳನ್ನು ಏರಬೇಕು ಎಂದು ತೋರಿಸಿದ್ದಾನೆ. ದೃಕ್‌ದೃಶ್ಯದ ಬಗ್ಗೆ ಹೇಳಿದ್ದಾನೆ. ಪ್ರಾಣಾಯಾಮವನ್ನು ಕುರಿತು ಹೇಳಿದ್ದಾನೆ. ಈ ಎಲ್ಲಾ ಮೆಟ್ಟಿಲುಗಳನ್ನು ಏರಿ ಕೊನೆಯ ಸ್ಥಿತಿಯನ್ನು ತಲುಪಿದಾಗ ಬ್ರಹ್ಮಾನುಭೂತಿಯನ್ನು ಪಡೆಯುತ್ತಾನೆ. ಕಾಮ್ಯಕರ್ಮ ಹಾಗೂ ಸತ್ಕರ್ಮದ ಬಗ್ಗೆ ಹೇಳಿದ್ದಾನೆ. ಗುಣತ್ರಯಗಳ ಸ್ವಭಾವಗಳನ್ನು ಕುರಿತು ಹೇಳಿದ್ದಾನೆ. ಜೀವತ್ರಯಗಳ ಬಗ್ಗೆ ಹೇಳಿದ್ದಾನೆ. ಸೃಷ್ಟಿತತ್ವದ ಬಗ್ಗೆ ಹೇಳಿ ಆ ಮಾರ್ಗದಲ್ಲಿ ಸಾಗಿ ಪರಬ್ರಹ್ಮಾನುಭೂತಿಯನ್ನು ಪಡೆಯಬಹುದೆಂಬ ಮಾರ್ಗವನ್ನು ತೋರಿಸಿದ್ದಾನೆ. ಈ ಗ್ರಂಥದ ಮತ್ತೊಂದು ವೈಶಿಷ್ಟ್ಯವೆಂದರೆ ಹಲವಾರು ಪಾರಿಭಾಷಿಕ ಪದಗಳಿಗೆ ವಿಶೇಷ ಅರ್ಥವನ್ನು ಕೊಟ್ಟಿದ್ದಾನೆ. ಉದಾಹರಣೆಗೆ ಸಾಧು ಎಂದರೇನು? ಅದಕ್ಕೆ ಇರುವ ವಿಶೇಷ ಅರ್ಥಗಳನ್ನು ತಿಳಿಸಿದ್ದಾನೆ. ನನಗೆ ತುಂಬಾ ಇಷ್ಟವಾದ ಪ್ರಕರಣವೆಂದರೆ ಮೋಹ ಮತ್ತು ವಿವೇಕರ ಯುದ್ಧ. ಇದನ್ನು ನೋಡಿದಾಗ ಚಿದಾನಂದ ಅವಧೂತರಿಗೆ ಕೇವಲ ಶಾಸ್ತ್ರದ ತಿಳುವಳಿಕೆ ಮಾತ್ರವೇ ಅಲ್ಲದೆ ಗುರುವಿನ ಅನುಗ್ರಹವೂ ಹೆಚ್ಚಾಗಿತ್ತು. ಜ್ಞಾನಸಿಂಧು ಸ್ವಾನುಭವಗಳ ಮೂಲಕ ತನ್ನನ್ನು ತಾನು ತಿಳಿದ ಕಾವ್ಯವಾಗಿದೆ. ತುಂಬಾ ಸರಳವಾಗಿದೆ. ಯಾರು ಬೇಕಾದರೂ ಓದಬಹುದು. ರೂಪಕಗಳ ಮೂಲಕ, ಉಪಮೆಗಳ ಮೂಲಕ ಹೀಗೆ ಅನೇಕ ಹೋಲಿಕೆಗಳನ್ನು ಮಾಡಿ ಮಾಡಿ ಈ ಕಾವ್ಯವನ್ನು ರಚನೆ ಮಾಡಿದ್ದಾನೆಂದು ಅತ್ಯಂತ ಸ್ವಾರಸ್ಯಕರವಾಗಿ ಜ್ಞಾನಸಿಂಧು ಕೃತಿಯ ಕುರಿತು ಮಾತನಾಡಿ ಶಾಂತಿ ಮಂತ್ರದೊಂದಿಗೆ ಮುಕ್ತಾಯ ಮಾಡಿದರು.

ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ಜ್ಞಾನಸಿಂಧು ಒಳಗೆ ಅವರು, ಜ್ಞಾನಸಿಂಧು ಹೊರಗೆ ನಾನು. ಈ ಸಭೆ ಅಂತರಂಗದ ಸಭೆ. ಇಷ್ಟವಾದ ಸಭೆ. ಬೇರೆ ಬೇರೆ ಸಭೆಗಳಲ್ಲಿ ಅಪರಿಚಿತರು ಇರ್ತಾರೆ. ಆದರೆ ಈ ಸಭೆಯಲ್ಲಿರುವವರೆಲ್ಲಾ ಒಂದಲ್ಲಾ ಒಂದು ರೀತಿಯಲ್ಲಿ ಪರಿಚಿತರೇ ಆಗಿರುವುದರಿಂದ ಈ ಸಭೆ ಅಂತರಂಗದ ಸಭೆಯಾಗಿದೆ. ಒಂದು ಶಾಸ್ತ್ರಗ್ರಂಥವನ್ನು, ಒಂದು ವೇದಾಂಗ ಗ್ರಂಥವನ್ನು ಅತ್ಯಂತ ಪರಿಣಾಮಕಾರಿಯಾಗಿ ನಮಗೆಲ್ಲಾ ಉಣಬಡಿಸಿದ್ದಾರೆ. ಆ ಗ್ರಂಥದ ಸವಿಯನ್ನು ಅನುಭವಿಸಿ, ಅದರ ಅನುಭಾವವನ್ನು ನಮಗೆಲ್ಲಾ ತಿಳಿಸಿ, ನಮ್ಮ ಸ್ವಭಾವ ಬದಲಾಗುವ ರೀತಿಯಲ್ಲಿ ಮಾಡಿ ಅಮೋಘವಾಗಿ ಇವತ್ತು ವಿಷಯ ಮಂಡನೆಯನ್ನು ಮಾಡಿದ್ದಾರೆ ಮಲ್ಲೇಪುರಂ ಎಂದು ಶ್ಲಾಘಿಸಿ, ಜ್ಞಾನಸಿಂಧು ಕೃತಿಯ ಹಿನ್ನೆಲೆಯಲ್ಲಿ ಇದುವರೆಗೂ ಬಂದಿರಬಹುದಾದ ಹಲವು ಕೃತಿಗಳನ್ನು ಸಭೆಗೆ ಪರಿಚಯಿಸಿದರು.

ಕೋಶಾಧಿಕಾರಿ ಚಂದ್ರಶೇಖರ್ ನಾದೂರು ಅವರು ದತ್ತಿಯ ವಿಶೇಷತೆಯನ್ನು ಸಭೆಗೆ ತಿಳಿಸಿಕೊಟ್ಟು, ಕಾರ್ಯಕ್ರಮದ ನಿರ್ವಹಣೆ ಮಾಡಿದರು. ಕಾರ್ಯದರ್ಶಿ ಡಾ. ಶಾಂತರಾಜು ಅವರು ಸಭೆಗೆ ಗಣ್ಯರನ್ನು ಪರಿಚಯಿಸಿ ಎಲ್ಲರನ್ನೂ ಗೌರವದಿಂದ ಸ್ವಾಗತಿಸಿದರು. ಚಂದ್ರಶೇಖರ್ ನಾದೂರರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

೧೬.೧೦.೨೦೨೬ ಶುಕ್ರವಾರ ಸಂಜೆ ೩–೦೦ ಗಂಟೆಗೆ
ಹೆಬ್ಬಗೋಡಿ ಗುಂಡಪ್ಪ ಜಾನಿಕಮ್ಮ ಸರಸ್ವತೀ ಪೂಜಾ ದತ್ತಿ–೨೦೨೬
ಸರಸ್ವತೀ ಪೂಜೆ

ಸರಸ್ವತಿ ದೇವರನಾಮಗಳ ಗಾಯನ : **ವಿದುಷಿ ಪದ್ಮಾ ಗುರುದತ್**


ಉಪಸ್ಥಿತಿ : **ಪ್ರೊ. ಜಿ.ಅಶ್ವತ್ಥನಾರಾಯಣ**

ಶರನ್ನವರಾತ್ರಿಯ ಸುಸಂದರ್ಭದಲ್ಲಿ ಹೆಬ್ಬಗೋಡಿ ಗುಂಡಪ್ಪ ಜಾನಿಕಮ್ಮ ದತ್ತಿ ಆಶ್ರಯದಲ್ಲಿ ೧೬.೧೦.೨೦೨೬ ರ ಶುಕ್ರವಾರ ಸಂಜೆ ೩–೦೦ ಗಂಟೆಗೆ ಶಾಸ್ತ್ರೋಕ್ತವಾಗಿ ಪುರೋಹಿತರ ನೇತೃತ್ವದಲ್ಲಿ ಸರಸ್ವತೀ ಪೂಜಾ ಕಾರ್ಯಕ್ರಮ ನಡೆಯಿತು.

ನಂತರ ಇದರ ಅಂಗವಾಗಿ ವಿದುಷಿ ಪದ್ಮಾ ಗುರುದತ್ ಅವರಿಂದ ಸರಸ್ವತಿ ದೇವರನಾಮಗಳ ಗಾಯನ ಕಾರ್ಯಕ್ರಮ ಪ್ರಾರಂಭಗೊಂಡಿತು. ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಶಾಂತರಾಜು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಯಾಕೆ ದೊಡ್ಡ ಮಟ್ಟದಲ್ಲಿ ಸರಸ್ವತೀ ಪೂಜೆ ಮಾಡುತ್ತಿಲ್ಲವೆಂದು ಯಾರೋ ಪ್ರಶ್ನೆ ಮಾಡಿದ್ದರು. ಆಗ ಇದಕ್ಕೆ ಉತ್ತರ ರೂಪದಲ್ಲಿ ಪ್ರವೇಶ ಮಾಡಿದವರು ಪ್ರೊ. ಜಿ. ಅಶ್ವತ್ಥನಾರಾಯಣ ಅವರು. ತಾನೊಂದು ದತ್ತಿಯನ್ನು ಸ್ಥಾಪನೆ ಮಾಡ್ತೀನಿ. ಅದರ ಆಶಯವೇನೆಂದರೆ ಈ ದತ್ತಿಯಡಿಯಲ್ಲಿ ಸರಸ್ವತೀ ಪೂಜೆ ಆಗಬೇಕು. ಜೊತೆಗೆ ಸರಸ್ವತಿಯನ್ನು ಕುರಿತ ದೇವರನಾಮಗಳ ಗಾಯನ ಆಗಬೇಕು. ಪೂಜೆಯ ನಂತರ ಚರುಪು ಕೊಡಬೇಕು. ಶಾಸ್ತ್ರೋಕ್ತವಾಗಿ ಪುರೋಹಿತರನ್ನು ಕರೆಸಿ ಅವರಿಂದ ಪೂಜಾಕಾರ್ಯ ನೆರವೇರಿಸಬೇಕೆಂದು ಸೂಚನೆಗಳನ್ನು ಕೊಟ್ಟರು. ಈ ಎಲ್ಲಾ ಸೂಚನೆಗಳ ಮುಖ್ಯ ಉದ್ದೇಶ ಒಟ್ಟು ಕಾರ್ಯಕ್ರಮ ಸಾಂಪ್ರದಾಯಿಕ ರೂಪದಲ್ಲಿ, ವ್ಯವಸ್ಥಿತವಾದ ಕ್ರಮದಲ್ಲಿ ನಡೆಯಬೇಕು ಎನ್ನುವುದಾಗಿತ್ತು ಎಂದು ಹೇಳಿ ಪ್ರೊ.ಅನಾಜಿ ಅವರನ್ನು, ಸಭೆಯಲ್ಲಿದ್ದವರನ್ನು ಗೌರವದಿಂದ ಸ್ವಾಗತಿಸಿದರು.

ಸಭೆಗೆ ವಿದುಷಿ ಪದ್ಮಾ ಗುರುದತ್ ಅವರನ್ನು ಸ್ವಾಗತಿಸಿ ಅವರ ಸಾಧನೆಗಳನ್ನು ಪರಿಚಯಿಸಿದರು. ಪರಿಚಯದ ನಂತರ ವಿದುಷಿ ಪದ್ಮಾ







ಗುರುದತ್ ಅವರು ಪುರಂದರದಾಸರ ಶರಣೆಂಬೆ ವಾಣಿ ಪೊರೆಯೇ ಕಲ್ಯಾಣಿ ಭಕ್ತಿಗೀತೆಯೊಂದಿಗೆ ತಮ್ಮ ಗಾಯನವನ್ನು ಪ್ರಾರಂಭಿಸಿ ಹಲವು ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಸಹೃದಯರ ಮನಸ್ಸಿನಲ್ಲಿ ಭಕ್ತಿಯ ಸಿಂಚನ ಮಾಡಿದರು.

ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡರು ಮಾತನಾಡುತ್ತಾ ಮೂರು ವರ್ಷಗಳ ಹಿಂದೆ ಪ್ರೊ.ಜಿ.ಅಶ್ವತ್ಥನಾರಾಯಣ ಅವರು ಅವರ ತಂದೆ ತಾಯಿಯವರ ಹೆಸರಿನಲ್ಲಿ ಸರಸ್ವತೀ ಪೂಜಾ ದತ್ತಿಯನ್ನಿರಿಸಿದರು. ಪ್ರಸ್ತುತ ವರ್ಷವೂ ಹಲವು ಸೂಚನೆಗಳನ್ನು ಕೊಟ್ಟು ವಿದುಷಿ ಪದ್ಮಾ ಗುರುದತ್ ಅವರನ್ನು ಗೊತ್ತುಮಾಡಿದರು. ಇವತ್ತಿನ ಅವರ ಮೂವತ್ತು ನಿಮಿಷಗಳ ಭಕ್ತಿಗೀತೆಗಳ ಗಾಯನವನ್ನು ನಾವೆಲ್ಲರೂ ಕೇಳಿ ಆನಂದಿಸಿದೆವು. ೭೫ರ ಪ್ರಾಯದಲ್ಲೂ ಭಕ್ತಿಯಿಂದ ಗೀತೆಗಳನ್ನು ಹಾಡಿರುವ ಇವರ ಶಿಷ್ಯ ಬಳಗ ದೇಶ ವಿದೇಶಗಳಲ್ಲಿದ್ದಾರೆ. ಅವರ ಸಾಧನೆಗೆ ಹಲವು ಪ್ರಶಸ್ತಿಗಳು ಸಂದಿವೆ ಎಂದು ಅವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಸರಸ್ವತೀ ಪೂಜೆಯ ವಿಶೇಷತೆಯನ್ನು ಕುರಿತು ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಮಾತನಾಡುತ್ತಾ ತಾವೆಲ್ಲರೂ ಈ ಪೂಜಾ ಕಾರ್ಯಕ್ರಮಕ್ಕೆ ಬಂದಿರುವುದು ನನಗೆ ತುಂಬಾ ಸಂತೋಷವನ್ನುಂಟು ಮಾಡಿದೆ. ಸರಸ್ವತಿ ಪೂಜೆಯ ದತ್ತಿಯನ್ನು ಏಕೆ ಇಟ್ಟೆ ಎನ್ನುವುದನ್ನಷ್ಟೇ ನಾನು ತಿಳಿಸಿಕೊಡಬೇಕಿದೆ. ಸುಮಾರು ೭೦ ವರ್ಷಗಳ ಹಿಂದೆ ಎ.ಆರ್. ಕೃಷ್ಣಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಸರಸ್ವತೀ ದತ್ತಿಯನ್ನಿರಿಸಿದ್ದರು. ಅಲ್ಲಿನ ಗ್ರಂಥಾಲಯಕ್ಕೆ ಸರಸ್ವತೀ ಭಂಡಾರ ಎಂದೇ ಹೆಸರಿಟ್ಟರು. ಎ.ಆರ್. ಕೃಷ್ಣಶಾಸ್ತ್ರಿಗಳ ಪ್ರೇರಣೆಯಿಂದ ಹಾಗೂ ನನ್ನ ಗುರುಗಳಾದ ಎಂ.ವಿ.ಸೀ. ಅವರು ಸ್ಥಾಪನೆ ಮಾಡಿರುವ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ನಡೆಯಬೇಕೆಂಬ ಕಾರಣದಿಂದ ದತ್ತಿಯನ್ನು ನನ್ನ ತಂದೆ ತಾಯಿಯವರ ಹೆಸರಿನಲ್ಲಿರಿಸಿದ್ದೇನೆಂದು ತಿಳಿಸಿದರು. ಕಾರ್ಯದರ್ಶಿ ಡಾ. ಶಾಂತರಾಜು ಅವರು ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಚರುಪು ಹಂಚಿಕೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಹಳಗನ್ನಡ ಕಾವ್ಯ ರಸಗ್ರಹಣ ತರಗತಿಗಳ ಉದ್ಘಾಟನೆ
೧೬.೧೦.೨೦೨೬ ಶುಕ್ರವಾರ ಸಂಜೆ ೫-೦೦ ಗಂಟೆಗೆ

ಉಪಸ್ಥಿತಿ: ಡಾ. ರಾಜಪ್ಪ ದಳವಾಯಿ, ಡಾ. ಕೆ.ಆರ್. ಗಣೇಶ್. ಡಾ. ಶ್ಯಾಮಲಾ ಪ್ರಕಾಶ್, ಡಾ. ಸುರೇಶ್ ಪಾಟೀಲ್, ಪ್ರೊ. ಚಂದ್ರಶೇಖರ್ ನಾದೂರು, ಡಾ. ಎನ್.ಆರ್. ಲಲಿತಾಂಬ, ಡಾ. ಶಾಂತರಾಜು, ಡಾ. ಬೈರಮಂಗಲ ರಾಮೇಗೌಡ

ಅಧ್ಯಕ್ಷತೆ: ಡಾ. ಆರ್. ಲಕ್ಷ್ಮೀನಾರಾಯಣ

ಸಹಕಾರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ವಿಶ್ವವಿದ್ಯಾಲಯಗಳ ಹಂತದಲ್ಲೇ ಹಳಗನ್ನಡ ಸಾಹಿತ್ಯವನ್ನು ಕಡೆಗಣಿಸುತ್ತಿರುವ ಹೊತ್ತಿನಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನ ೨೮ ವರ್ಷಗಳಿಂದ ನಿರಂತರವಾಗಿ ಆಸಕ್ತರಿಗೆ ಹಳಗನ್ನಡ ಕಾವ್ಯಗಳ ಬೋಧನಾ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ. ಪ್ರತಿಷ್ಠಾನದ ಗೌರವ ಅಧ್ಯಕ್ಷರು ಡಾ. ಆರ್. ಲಕ್ಷ್ಮೀನಾರಾಯಣ ಅವರ ಅಧ್ಯಕ್ಷತೆಯಲ್ಲಿ ೨೦೨೬ನೇ ಸಾಲಿನ ಹಳಗನ್ನಡ ತರಗತಿಗಳ ಉದ್ಘಾಟನಾ ಸಮಾರಂಭ ನಡೆಯಿತು. ಕಾರ್ಯಕ್ರಮದ ಆರಂಭಕ್ಕೆ ಪ್ರತಿಷ್ಠಾನದ ಕಾರ್ಯದರ್ಶಿ ಡಾ.ಶಾಂತರಾಜು ಬೋಧನಾ ಕಾರ್ಯವನ್ನು ನಡೆಸಿಕೊಡುವ ಪ್ರಾಧ್ಯಾಪಕರುಗಳನ್ನು ವೇದಿಕೆಗೆ ಬರಮಾಡಿಕೊಂಡರು.

ಶಾಂತರಾಜು ಪ್ರಾಸ್ತಾವಿಕ ಮಾತನ್ನಾಡುತ್ತಾ, ಹಿಂದಿನ ಎಲ್ಲಾ ಪರಂಪರೆಯ ಕೊಂಡಿಗಳನ್ನು ಕಳಚಿಕೊಳ್ಳದೆ ನಮ್ಮ ಭವಿಷ್ಯದ ಬದುಕನ್ನು ವರ್ತಮಾನದ ತಲ್ಲಣಗಳ ಜೊತೆಯಲ್ಲಿ ಬೆಸೆಯುವ ಕೆಲಸವನ್ನು ಬಿ.ಎಂ.ಶ್ರೀ. ಪ್ರತಿಷ್ಠಾನ ನಡೆಸಿಕೊಂಡು ಬರುತ್ತಿದೆ ಎಂದು ೨೮ನೇ ಹಳಗನ್ನಡ ನಡುಗನ್ನಡ ಕಾವ್ಯ ರಸಗ್ರಹಣ ತರಗತಿಗಳಿಗೆ ಆಸಕ್ತಿವಹಿಸಿ

ಬಂದಿರುವ ವಿದ್ಯಾರ್ಥಿಗಳನ್ನು ಪ್ರೀತಿಯಿಂದ ಸ್ವಾಗತಿಸಿದರು. ನಂತರ ವೇದಿಕೆಯಲ್ಲಿದ್ದ ಬೋಧಕರುಗಳನ್ನು ಸ್ವಾಗತಿಸಿ ಅವರ ಅವರ ಸಾಧನೆಗಳನ್ನು ಸಭೆಗೆ ಸಂಕ್ಷಿಪ್ತವಾಗಿ ಪರಿಚಯಿಸಿದರು.

ಡಾ. ಆರ್. ಲಕ್ಷ್ಮೀನಾರಾಯಣ ಅವರು ವೇದಿಕೆಯಲ್ಲಿದ್ದ ಎಲ್ಲಾ ಅಧ್ಯಾಪಕರುಗಳೊಟ್ಟಿಗೆ ದೀಪವನ್ನು ಬೆಳಗಿಸಿ ಹಳಗನ್ನಡ ನಡುಗನ್ನಡ ಕಾವ್ಯ ರಸಗ್ರಹಣ ತರಗತಿಗಳ ಉದ್ಘಾಟನೆಯನ್ನು ನೆರವೇರಿಸಿದರು.

ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡರು ಮಾತನಾಡುತ್ತಾ ನಾನು ಅಧ್ಯಕ್ಷನಾಗಿ ಬರುವ ಮೊದಲಿನಿಂದಲೂ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಹಳಗನ್ನಡ ತರಗತಿಗಳು ನಡೆದುಕೊಂಡು ಬರುತ್ತಿವೆ. ಹಳಗನ್ನಡ ತಜ್ಞರಾದ ವಿದ್ವಾಂಸರು/ಅಧ್ಯಾಪಕರುಗಳು ಈ ತರಗತಿಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ವಯೋಮಾನವನ್ನು ಗಮನಿಸದೆ ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದ ಎಂಬತ್ತು ವರ್ಷಗಳವರೆಗಿನ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. ಪ್ರೌಢಶಾಲೆ ಶಿಕ್ಷಕರು, ಪಿಯುಸಿ, ಪದವಿ ಉಪನ್ಯಾಸಕರುಗಳಾಗಿರುವವರು, ಹಳಗನ್ನಡ ನಡುಗನ್ನಡ ಕಾವ್ಯಗಳನ್ನು ಬೋಧನೆ ಮಾಡಲು ಕಷ್ಟವಾಗುತ್ತಿರುವವರಿಗೆ ಈ ತರಗತಿಗಳಿಂದ ತುಂಬಾ ಅನುಕೂಲವಾಗುತ್ತಿದೆ. ಕೀಳರಿಮೆಯಿಂದ ಹೊರಬರುವುದಕ್ಕೆ, ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದಕ್ಕೆ ನಮ್ಮ ಹಳಗನ್ನಡ ನಡುಗನ್ನಡ ಕಾವ್ಯತರಗತಿಗಳು ತುಂಬಾ ಸಹಕಾರಿಯಾಗಿವೆ. ನಮ್ಮ ಶಬ್ದಭಂಡಾರ ಹೆಚ್ಚಾಗುತ್ತದೆ. ಎರಡು ಮೂರು ವರ್ಷಗಳಿಂದ ನಾನು ಗಮನಿಸುತ್ತಿದ್ದೇನೆ. ವಾಟ್ಸ್‌ಆಪ್‌ನಲ್ಲಿ ಗುಂಪು ಮಾಡಿಕೊಂಡು ಅಲ್ಲಿಯೂ ಹಳಗನ್ನಡ ನಡುಗನ್ನಡ ಕಾವ್ಯಗಳಿಗೆ ಸಂಬಂಧಪಟ್ಟಂತೆ ಬರುವ ಅನುಮಾನಗಳಿಗೆ, ಪ್ರಶ್ನೆಗಳಿಗೆ ಚರ್ಚೆಗಳು, ಸಂವಾದಗಳು ನಡೆಯುತ್ತಿರುವುದು ಎಷ್ಟು ಒಳ್ಳೆಯ ಬೆಳವಣಿಗೆ. ಬಿ.ಎಂ.ಶ್ರೀ. ಪ್ರತಿಷ್ಠಾನದ ಹಳಗನ್ನಡ ತರಗತಿಗಳಿಗೆ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ನೋಡಿದರೆ, ನಾವು ಮಾಡುತ್ತಿರುವ ಈ ಕಾರ್ಯ ಹೆಚ್ಚು ಜನರಿಗೆ ತಲುಪುತ್ತಿದೆ ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಎಲ್ಲರಿಗೂ ವಂದಿಸಿ ತಮ್ಮ ಮಾತುಗಳನ್ನು ಮುಕ್ತಾಯಮಾಡಿದರು.

ರಸಗ್ರಹಣ ವಿದ್ಯಾರ್ಥಿಗಳ ಪರವಾಗಿ ಮಂಡಗದ್ದೆ ಶ್ರೀನಿವಾಸಯ್ಯನವರು ಮಾತನಾಡುತ್ತ, ನಾನು ಆರು ವರ್ಷಗಳಿಂದಲೂ ಈ ಹಳಗನ್ನಡ ತರಗತಿಗಳಿಗೆ ಬರ್ತಿದ್ದೀನಿ. ಇದೊಂದು ಅದ್ಭುತ ಅನುಭವ ನನಗೆ. ಇದರಿಂದ ನಾನು ಎಷ್ಟೊಂದು ಪ್ರೇರಣೆಗೊಂಡಿದ್ದೇನೆ ಎಂದರೆ ಪಂಪನ ಮಾನವ ಜಾತಿ ತಾನೊಂದೆ ವಲಂ ಪದ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ಕೃತಿಯನ್ನು ರಚನೆ ಮಾಡಿದ್ದೇನೆಂದು ಹೆಮ್ಮೆಯಿಂದ ಹೇಳಿದರು.

ಡಾ.ಶ್ಯಾಮಲ ಪ್ರಕಾಶ್ ಅವರು ಕುಮಾರವ್ಯಾಸ ಭಾರತದಿಂದ ವಾರಿಜಾಸನೇ ಪದ್ಯ ಭಾಗವನ್ನು ವಾಚಿಸಿ ಅದರ ವ್ಯಾಖ್ಯಾನವನ್ನು ಮಾಡಿ ಅಧಿಕೃತವಾಗಿ ಹಳಗನ್ನಡ ನಡುಗನ್ನಡ ಕಾವ್ಯತರಗತಿಗಳಿಗೆ ಚಾಲನೆಯನ್ನು ಕೊಟ್ಟರು.

ಎರಡು ವರ್ಷಗಳಿಂದಲೂ ವಿದ್ಯಾರ್ಥಿಯಾಗಿರುವ ಮುರಳೀಧರ್ ಅವರು ವೇದಿಕೆಯಲ್ಲಿರುವ ಎಲ್ಲಾ ವಿದ್ವಾಂಸರುಗಳಿಗೆ ನಮಸ್ಕರಿಸಿ ಇವರೆಲ್ಲರೂ ಹಳಗನ್ನಡ ಕಾವ್ಯಗಳಲ್ಲಿರುವ ವಿಚಾರಗಳನ್ನು ಅನ್‌ಲಾಕ್ ಮಾಡಿ ನಮ್ಮಗಳ ಮುಂದೆ ತೆರೆದಿಟ್ಟು ರಸಾನುಭವವನ್ನುಂಟು ಮಾಡುತ್ತಿದ್ದಾರೆ. ದೀರ್ಘವಾಗಿ ಕವಿತೆಗಳನ್ನು ಬರೆಯುವ ಸಾಮರ್ಥ್ಯವನ್ನು ಈ ಹಳಗನ್ನಡ ತರಗತಿಗಳಿಂದ ನಾನು ಪಡೆದುಕೊಂಡಿದ್ದೇನೆಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಶ್ಲಾಘಿಸಿದರು. ಕವಿತೆಯೊಂದನ್ನು ವಾಚಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗೌರವಾಧ್ಯಕ್ಷರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು ಮಾತನಾಡುತ್ತಾ ಕುವೆಂಪು ಅವರು ಜನಪ್ರಿಯ ವಾಲ್ಮೀಕಿ ರಾಮಾಯಣವನ್ನು ತಾನು ಏಕೆ ಬರೆದೆ ಎನ್ನುವುದನ್ನು ಹೇಳಿರುವ ಮಾತುಗಳನ್ನು ನೆನೆಪಿಸಿಕೊಂಡರು. ನಿಜವಾದ ಕವಿಗಳು ಬೆನ್ನಹಿಂದೆ ಬೆಳಕಾಗಿ ಮಾರ್ಗವನ್ನು ತೋರಿಸುತ್ತಿರುತ್ತಾರೆ. ಇಂತಹ ಕವಿಗಳು ರಚನೆ ಮಾಡಿರುವ ಕಾವ್ಯಗಳನ್ನು ನಾವು ಓದದೇ ಇದ್ದರೆ ನಮಗೆ ತುಂಬಾ ನಷ್ಟ ಉಂಟಾಗುತ್ತದೆ. ವಯೋಮಾನದ ಅಂತರವಿಲ್ಲದೆ ಎಲ್ಲಾ ವಯೋಮಾನದವರು ಕಾವ್ಯಗಳನ್ನು ಓದಬೇಕೆಂದು ಆಸಕ್ತಿಯಿಂದ ಬರ್ತಿದ್ದೀರಲ್ಲ ಅದು ನನಗೆ ತುಂಬಾ ಸಂತೋಷ. ದೊಡ್ಡ ದೊಡ್ಡ ವಿಜ್ಞಾನಿಗಳು, ಬೇರೆ ವಿಷಯಗಳ ಪ್ರಾಧ್ಯಾಪಕರುಗಳು ನಿವೃತ್ತಿಯ ನಂತರ ಸಾಹಿತ್ಯದ ಅಭಿರುಚಿಯನ್ನು ತಂದುಕೊಂಡು ಇದರ ಮೊರೆಹೊಕ್ಕಿರುವುದನ್ನು ಗಮನಿಸಬಹುದು. ಸಾಹಿತ್ಯದ ಸಾಮ್ರಾಜ್ಯ ಅದು ಎಲ್ಲರನ್ನೂ ಒಳಗೊಳ್ಳುವಂತಹದು ಎಂದು ಹೇಳಿ ಎಲ್ಲರಿಗೂ ಶುಭಹಾರೈಸಿದರು.

ಕೊನೆಯಲ್ಲಿ ಡಾ.ಎನ್.ಆರ್.ಲಲಿತಾಂಬ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು.





ಶಾ. ಬಾಲುರಾವ್ ಅನುವಾದ ಪ್ರಶಸ್ತಿ ಮತ್ತು ಯುವ ಬರಹಗಾರ ಪ್ರಶಸ್ತಿ ಪ್ರದಾನ ಸಮಾರಂಭ ೨೫.೧೦.೨೦೨೬ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ

ಪ್ರಶಸ್ತಿ ಪ್ರದಾನ : **ಡಾ. ಎಂ.ಎಸ್.ಮೂರ್ತಿ**

ಮುಖ್ಯ ಅತಿಥಿ: **ಶ್ರೀ ಜಯರಾಮರಾಜೇ ಅರಸ್**

ಅನುವಾದ ಪ್ರಶಸ್ತಿ ಪಡೆದವರು: **ಶ್ರೀ ಡಿ.ಎನ್. ಶ್ರೀನಾಥ್**

ಯುವ ಬರಹಗಾರರ ಪ್ರಶಸ್ತಿ ಪಡೆದವರು: **ಶ್ರೀಮತಿ ಮಲ್ಲಮ್ಮ ಜೊಂಡಿ**

ವಿಶೇಷ ಅತಿಥಿ: **ಶ್ರೀಮತಿ ಕಮಲಿನಿ ಶಾ.ಬಾಲುರಾವ್**

ಉಪಸ್ಥಿತಿ: **ಡಾ. ಆರ್. ಲಕ್ಷ್ಮೀನಾರಾಯಣ**

ಅಧ್ಯಕ್ಷತೆ: **ಡಾ. ಬೈರಮಂಗಲ ರಾಮೇಗೌಡ**

ಸಹಕಾರ: **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ವಿದುಷಿ ಸುಮಲತಾ ಮಂಜುನಾಥ್ ಅವರು ಪ್ರಸ್ತುತಪಡಿಸಿದ "ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ" ಬಿ.ಎಂ.ಶ್ರೀ. ಅವರ ಜನಪ್ರಿಯ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕಾರ್ಯದರ್ಶಿ ಡಾ. ಶಾಂತರಾಜು ಪ್ರಾಸ್ತಾವಿಕ ಮಾತುಗಳನ್ನಾಡುತ್ತಾ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಜರುಗುವ ಕಾರ್ಯಕ್ರಮಗಳಲ್ಲಿ ಬಹುದೊಡ್ಡ ಕಾರ್ಯಕ್ರಮ ಇದಾಗಿದೆ. ಗುರುವಿನ ಆಣತಿಯಂತೆ ಎಂ.ವಿ.ಸೀ. ಅವರು ಬಹು ದೊಡ್ಡ ಸಾಹಿತ್ಯ ಭಂಡಾರವನ್ನು ಸಂರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನವನ್ನು ಸ್ಥಾಪಿಸಿದರು. ಅಂದಿನಿಂದ ಪ್ರತಿಷ್ಠಾನ ಹಿರಿಯರ ಮಾರ್ಗದರ್ಶನದಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ರಂಗದಲ್ಲಿ ೪೭ ವರ್ಷಗಳಿಂದ ಸಾರ್ಥಕ ಸೇವೆಯನ್ನು ನಡೆಸಿಕೊಂಡು ಬರುತ್ತಿದೆ. ಬಿ.ಎಂ.ಶ್ರೀ. ಅವರ ಮೊಮ್ಮಗಳು ಶ್ರೀಮತಿ ಕಮಲಿನಿ ಶಾ.ಬಾಲುರಾವ್ ಅವರ ಗಮನಕ್ಕೆ ಪ್ರತಿಷ್ಠಾನದ ಯಾವುದಾದರೊಂದು ಕೊರತೆಯನ್ನು ತಂದರೆ ಅದನ್ನು ತಮ್ಮ ತಲೆಯ ಮೇಲೆ ಹೊತ್ತು ಪೂರೈಸಿಕೊಡುವಂಥ ಬದ್ಧತೆಯನ್ನು ಹೊಂದಿದ್ದಾರೆ. ಕಮಲಿನಿ ಅವರು ತಮ್ಮ ಪತಿ ಶಾ. ಬಾಲುರಾವ್ ಹೆಸರಿನಲ್ಲಿ ಇಡುಗಂಟನ್ನು ಇರಿಸಿ ಈ ಪ್ರಶಸ್ತಿಗಳನ್ನು ನೀಡಲು ಅನುವು ಮಾಡಿಕೊಟ್ಟಿದ್ದಾರೆಂದು ಕೃತಜ್ಞತೆಗಳನ್ನು ತಿಳಿಸಿದರು. ಪ್ರಸ್ತುತ ಸಾಲಿನ ಅನುವಾದ ಪ್ರಶಸ್ತಿಯನ್ನು ಪಡೆದಿರುವ ಶ್ರೀ ಡಿ.ಎನ್. ಶ್ರೀನಾಥ್ ಅವರ ಸಾಧನೆ ಮತ್ತು ಯುವ ಬರಹಗಾರ ಪ್ರಶಸ್ತಿಗೆ ಭಾಜನರಾಗಿರುವ ಶ್ರೀಮತಿ ಮಲ್ಲಮ್ಮ ಜೊಂಡಿ ಅವರ ಸಾಧನೆಯನ್ನು ಸಭೆಗೆ ಪರಿಚಯಿಸಿ ಆತ್ಮೀಯವಾಗಿ ಸ್ವಾಗತಿಸಿದರು. ನಂತರ ವೇದಿಕೆಯಲ್ಲಿದ್ದ ಗಣ್ಯರನ್ನು ಪರಿಚಯಿಸಿ ಸ್ವಾಗತಿಸಿದರು.

ಪ್ರತಿಷ್ಠಾನದ ಕೋಶಾಧಿಕಾರಿ ಚಂದ್ರಶೇಖರ್ ನಾದೂರು ಅವರು ಮೊದಲಿಗೆ ಶ್ರೀ ಡಿ.ಎನ್. ಶ್ರೀನಾಥ್ ಅವರ ಪ್ರಶಸ್ತಿ ಪತ್ರವನ್ನು ವಾಚನ ಮಾಡಿ ಇವರ ಸರ್ದಾರ್ ವಲ್ಲಭಭಾಯಿ ಪಟೇಲ್ ಅನುವಾದ ಕೃತಿಗೆ ೨೦೨೬ನೇ ಸಾಲಿನ ಶಾ. ಬಾಲುರಾವ್ ಅನುವಾದ ಪ್ರಶಸ್ತಿ ಬಂದಿದೆ ಎಂದು ತಿಳಿಸಿದರು. ಯುವ ಬರಹಗಾರ ಪ್ರಶಸ್ತಿಗೆ ಭಾಜನರಾದ ಶ್ರೀಮತಿ ಮಲ್ಲಮ್ಮ ಜೊಂಡಿಯವರ ಪ್ರಶಸ್ತಿ ಪತ್ರವನ್ನು ವಾಚನ ಮಾಡಿ ಅವರ 'ದಿಡುಗು' ಕಥಾಸಂಕಲನಕ್ಕೆ ಈ ಪ್ರಶಸ್ತಿ ಬಂದಿದೆ ಎಂದು ತಿಳಿಸಿದರು. ವೇದಿಕೆಯಲ್ಲಿದ್ದ ಗಣ್ಯರು ಇಬ್ಬರಿಗೂ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿ ಅಭಿನಂದಿಸಿದರು.

ಡಾ. ಎಂ.ಎಸ್. ಮೂರ್ತಿ ಪ್ರಶಸ್ತಿ ಪ್ರದಾನ ಮಾಡಿ "ಬಿ.ಎಂ.ಶ್ರೀ. ಪ್ರತಿಷ್ಠಾನದ ಈ ಮಹತ್ವಪೂರ್ಣ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ನನಗೆ ಸಂತೋಷವನ್ನು ತಂದಿದೆ. ಅಕ್ಷರದ ಸೌಜನ್ಯ ಬಹಳ ದೊಡ್ಡದು. ಒಬ್ಬ ಕಲಾವಿದನಾಗಿ ಪ್ರಜ್ಞಾವಂತಿಕೆಯಿಂದ ಮತ್ತೆ ಮತ್ತೆ ಅಕ್ಷರವನ್ನು ಟೀಕೆ ಮಾಡಿದ್ದೀನಿ. ಪಂಪನಿಂದ ಇತ್ತೀಚಿನ ತಳುಕಿನ ವೆಂಕಣಯ್ಯ, ಕುವೆಂಪುವರೆಗೂ ಸಾಹಿತಿಗಳು ನಮ್ಮ ನಾಡಿನ ಸಂಸ್ಕೃತಿಯನ್ನು ತಮ್ಮ ಅಕ್ಷರ ಜ್ಞಾನದ ಮೂಲಕ ಕಟ್ಟಿದ್ದಾರೆ. ನಮ್ಮ ಪರಂಪರೆಯನ್ನು ತಮ್ಮ ಮುಂದಿನ ತಲೆಮಾರಿಗೆ ತಲುಪಿಸಿದ್ದಾರೆ. ನನ್ನ ಬದುಕಿನಲ್ಲಿ ಸಾಹಿತ್ಯ ದಿಗ್ಗಜರ ಭೇಟಿಯಾಯಿತು. ಅದರಲ್ಲಿ ಡಾ.ಶಿವರಾಮ ಕಾರಂತರನ್ನು ಐದು ದಶಕಗಳ ಹಿಂದೆ ಭೇಟಿಯಾಗಿರಲಿಲ್ಲವೆಂದರೆ ಈ ಹಂತವನ್ನು ತಲುಪಲು ನನಗೆ ಸಾಧ್ಯವಾಗುತ್ತಿರಲಿಲ್ಲ. ಹೋರಾಟ ಎಂದರೆ ಏನು? ಚಳವಳಿ ಎಂದರೆ ಏನು? ಬದುಕಿನಲ್ಲಿ ಏನನ್ನು ಮಾಡಬೇಕು ಎನ್ನುವುದನ್ನು ಶಿವರಾಮ ಕಾರಂತರು ಕಲಿಸಿದರೆ, ಪಿ.ಲಂಕೇಶ್ ಅವರು ಏನನ್ನು ಮಾಡಬಾರದು ಎನ್ನುವುದನ್ನು ಕಲಿಸಿದರು. ಕೈ ಮುಗಿದು





ಬೇಡುವುದಕ್ಕೆ ಏನಿದೆ, ಬದುಕೇ ಒಂದು ವರವಲ್ಲವೇ ಎನ್ನುವ ಶಿವರಾಮ ಕಾರಂತರ ಮಾತು ನನ್ನ ಪ್ರಜ್ಞೆಯಲ್ಲಿ ಸದಾ ಅನುರಣಿಸುತ್ತಿರುತ್ತದೆ. ಮಾಸ್ತಿಯಂತವರು ಕೇವಲ ಸಾಹಿತಿಯಲ್ಲ. ನಮ್ಮ ನಾಡಿನ ಸಂಸ್ಕೃತಿಯ ಅಜ್ಜ" ಎಂದು ತಮ್ಮ ಬದುಕಿನ ಅನೇಕ ಅನುಭವಗಳನ್ನು ನೆನಪಿಸಿಕೊಂಡರು.

ಮುಖ್ಯ ಅತಿಥಿಗಳಾಗಿದ್ದ ಜಯರಾಮರಾಜೇ ಅರಸ್ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರೂ ಆಗಿದ್ದು ಅವರು ಮಾತನಾಡುತ್ತಾ ಡಿ.ಎನ್. ಶ್ರೀನಾಥ್ ಅನುವಾದ ಕ್ಷೇತ್ರದಲ್ಲಿ ಭೀಷ್ಮ ಇದ್ದಂತೆ, ಅಷ್ಟೊಂದು ಅನುವಾದ ಕೃತಿಗಳನ್ನು ಅನೇಕ ವರ್ಷಗಳಿಂದ ಪ್ರಕಟಿಸುತ್ತಾ ಬರುತ್ತಿದ್ದಾರೆಂದು ಹೇಳಿ ಶ್ಲಾಘಿಸಿದರು. ಬೇರೆ ಬೇರೆ ಪ್ರದೇಶಗಳ ಸಂಸ್ಕೃತಿ ಗೊತ್ತಾಗಬೇಕಾದರೆ ಅದು ಅನುವಾದ ಸಾಹಿತ್ಯ ಕೃತಿಗಳಿಂದ ಮಾತ್ರವೇ ಸಾಧ್ಯ. ಅನುವಾದವೂ ಶ್ರೇಷ್ಠವಾದ ಸಾಹಿತ್ಯವೇ. ಪ್ರಶಸ್ತಿಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಎಚ್.ಎಸ್.ಎಂ.ಪ್ರಕಾಶ್ ಅವರು ಜೊತೆಯಾಗಿದ್ದರು. ನಾವಿಬ್ಬರು ಜೊತೆಯಾಗಿ ಪ್ರಶಸ್ತಿ ಆಯ್ಕೆಗೆ ಬಂದಿದ್ದ ಹನ್ನೊಂದು ಕೃತಿಗಳನ್ನು ಓದಿದೆವು. ಪ್ರತಿಯೊಂದು ಕೃತಿಯೂ ತುಂಬಾ ಚೆನ್ನಾಗಿಯೇ ಇತ್ತು. ಆದರೂ ಎಲ್ಲಾ ದೃಷ್ಟಿಕೋನಗಳಿಂದ ಪರಿಶೀಲಿಸಿ ಡಿ.ಎನ್. ಶ್ರೀನಾಥ್ ಅವರ ಕೃತಿಯನ್ನು ಆಯ್ಕೆ ಮಾಡಿದೆವು ಎಂದು ತಮ್ಮ ಭಾವನೆಗಳನ್ನು ಹಂಚಿಕೊಂಡರು.

ಗೌರವಾಧ್ಯಕ್ಷರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು ಮುಖ್ಯವಾಗಿ ಶಾ.ಬಾಲುರಾವ್ ಅವರನ್ನು ನೆನಪು ಮಾಡಿಕೊಳ್ಳಬೇಕೆನ್ನುತ್ತಾ ಇವರು ಬಹಳ ಅಪರೂಪದ ವ್ಯಕ್ತಿ. ಹಲವಾರು ಅನುವಾದಗಳನ್ನು ಮಾಡಿದ್ದಾರೆ. ಇವರ ವೈಶಿಷ್ಟ್ಯವೆಂದರೆ ಮೂಲ ಭಾಷೆಯನ್ನು ಕಲಿತು ಅನುವಾದಗಳನ್ನು ಮಾಡಿರುವುದು. ಇವರು ರಷ್ಯನ್ ಭಾಷೆಯನ್ನು, ಜರ್ಮನ್ ಭಾಷೆಯನ್ನು, ಹಿಂದಿ ಭಾಷೆಯನ್ನು ಕಲಿತು ಮೂಲ ಕೃತಿಗಳನ್ನು ಆಧರಿಸಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಮೂಲ ಭಾಷೆಯಿಂದ ಅನುವಾದ ಮಾಡಿರುವ ಬಹಳ ಅಪರೂಪದ ವ್ಯಕ್ತಿ ಶಾ. ಬಾಲುರಾವ್. ಇವರು ಅನುವಾದ ಕೃತಿಗಳನ್ನಷ್ಟೇ ಅಲ್ಲದೆ ಸ್ವತಂತ್ರ ಕೃತಿಗಳನ್ನೂ ರಚನೆ ಮಾಡಿದ್ದಾರೆ. ಇಂತಹವರ ಹೆಸರಿನಲ್ಲಿ ಅನುವಾದ ಪ್ರಶಸ್ತಿಯನ್ನು ಕಮಲಿನಿ ಶಾ.ಬಾಲುರಾವ್ ಅವರು ಸ್ಥಾಪನೆ ಮಾಡಿರುವುದು ತುಂಬಾ ದೊಡ್ಡದೆಂದು ಶ್ಲಾಘಿಸುತ್ತಾ ತಮ್ಮ ವಿಚಾರಗಳನ್ನು ಹಂಚಿಕೊಂಡರು.

ಯುವ ಬರಹಗಾರ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರಾಗಿದ್ದ ಡಾ. ಟಿ. ವೆಂಕಟೇಶ್‌ಮೂರ್ತಿಯವರು ಮಾತನಾಡುತ್ತಾ ಪ್ರಶಸ್ತಿಗೆ ಐದು ಕೃತಿಗಳು ಬಂದಿದ್ದವು. ಮಲ್ಲಮ್ಮ ಅವರ ಕಥೆಗಳು ಮಿಕ್ಕ ಕಥಾ ಸಂಕಲನಗಳಿಗಿಂತ ನಮಗೆ ತುಂಬಾ ವಿಶೇಷ ಎನಿಸಿದವು. ಇಷ್ಟು ಅಪರೂಪವೆನಿಸುವ ರೀತಿಯಲ್ಲಿ ಬರೆಯುವ ಈಕೆ ಇದುವರೆಗೂ ಎಲ್ಲಿಯೂ ಯಾವ ವೇದಿಕೆಯಲ್ಲಿಯೂ ಕಾಣಿಸಿಕೊಂಡಿಲ್ಲ. ಇಂತಹವರನ್ನು ಪ್ರೋತ್ಸಾಹಿಸುವುದು ಈ ಪ್ರಶಸ್ತಿಯ ಉದ್ದೇಶವಲ್ಲವೇ ಎಂದು ತಿಳಿದು ಮಲ್ಲಮ್ಮ ಜೊಂಡಿಯವರನ್ನು ಆಯ್ಕೆ ಮಾಡಲಾಯಿತೆಂದು ತಿಳಿಸಿ ಅಭಿನಂದಿಸಿದರು.

ಅನುವಾದ ಪ್ರಶಸ್ತಿಯನ್ನು ಸ್ವೀಕರಿಸಿದ ಡಿ.ಎನ್. ಶ್ರೀನಾಥ್ ಅವರು ಮಾತನಾಡುತ್ತಾ ಶ್ರೇಷ್ಠ ಅನುವಾದಕರಾಗಿದ್ದ ಶಾ.ಬಾಲುರಾವ್ ಹೆಸರಿನಲ್ಲಿರುವ ಪ್ರಶಸ್ತಿಯನ್ನು ದೊಡ್ಡ ಕಲಾವಿದರಾದ ಎಂ.ಎಸ್. ಮೂರ್ತಿಯವರಿಂದ ಪಡೆದಿರುವುದು ನನಗೆ ತುಂಬಾ ಸಂತೋಷವನ್ನು ಕೊಟ್ಟಿದೆ. ಅನುವಾದ ಮಾಡುವುದು ಸುಲಭ. ಆದರೆ ಮೂಲ ಕೃತಿಕಾರರಿಂದ ಅನುಮತಿ ಪಡೆಯುವುದು ಕಷ್ಟವಾದ ಕೆಲಸ ಎನ್ನುತ್ತಾ ತಮ್ಮ ಅನುವಾದದ ಸಂದರ್ಭದ ಹಲವಾರು ಅನುಭವಗಳನ್ನು ನೆನಪಿಸಿಕೊಂಡು ಬಿ.ಎಂ.ಶ್ರೀ. ಪ್ರತಿಷ್ಠಾನದಿಂದ ಪ್ರಶಸ್ತಿಯನ್ನು ಪಡೆಯಬೇಕು ಎನ್ನುವ ಹಲವು ವರ್ಷಗಳ ನನ್ನ ಕನಸು ಈ ವರ್ಷ ಈಡೇರಿದೆ ಎನ್ನುತ್ತಾ ಕೃತಜ್ಞತೆಗಳ ಸಹಿತ ಧನ್ಯವಾದಗಳನ್ನು ಸಮರ್ಪಿಸಿದರು.

ಯುವ ಬರಹಗಾರ ಪ್ರಶಸ್ತಿಯನ್ನು ಸ್ವೀಕರಿಸಿದ ಮಲ್ಲಮ್ಮ ಜೊಂಡಿ ಅವರು ಪ್ರಶಸ್ತಿಗೆ ಆಯ್ಕೆ ಮಾಡಿರುವುದಕ್ಕೆ ಆಯ್ಕೆ ಸಮಿತಿ ಸದಸ್ಯರಿಗೂ, ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೂ ಧನ್ಯವಾದಗಳನ್ನು ತಿಳಿಸಿದರು. ಯಾವ ಭಾವನೆಗಳನ್ನು ನಮ್ಮ ಮಾತಿನ ಮೂಲಕ ಅಭಿವ್ಯಕ್ತಿಸಲು ಸಾಧ್ಯವಾಗುವುದಿಲ್ಲವೋ ಅಂತಹ ವಿಷಯಗಳನ್ನು ಕಥೆಗಳ ಮೂಲಕ ಅಭಿವ್ಯಕ್ತಿಸುತ್ತೇವೆ. ಕಥೆಯೆಂದರೆ ನಿರಂತರವಾಗಿ ಹರಿಯುವ ಬದುಕಿಗೆ ಒಂದು ಚೌಕಟ್ಟನ್ನು ಒದಗಿಸುತ್ತದೆ ಎಂಬ ಪೂ.ಚಂ. ತೇಜಸ್ವಿಯವರ ಮಾತನ್ನು ನೆನಪಿಸಿಕೊಳ್ಳುತ್ತಾ, ನನ್ನ ಹಳ್ಳಿಯ ಜನರ ಬದುಕು ಎಲ್ಲವನ್ನು ನನ್ನ ಕಥೆಗಳ ಮೂಲಕ ಕಟ್ಟಿಕೊಡಬೇಕೆನ್ನುವುದೇ ನನ್ನ ಉದ್ದೇಶ. ನನ್ನ ಈ ಪ್ರಯತ್ನವನ್ನು ಬಿ.ಎಂ.ಶ್ರೀ. ಪ್ರತಿಷ್ಠಾನ ಗುರುತಿಸಿರುವುದಕ್ಕೆ ನನ್ನ ಕೃತಜ್ಞತೆಗಳು ಎಂದು ತಮ್ಮ ಭಾವನೆಗಳನ್ನು ಹಂಚಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಡಾ. ಬೈರಮಂಗಲ ರಾಮೇಗೌಡ ಅವರು ಮಾತನಾಡುತ್ತಾ ಪ್ರತಿಷ್ಠಾನ ಪ್ರದಾನ ಮಾಡುತ್ತಿರುವ ಹಲವಾರು ಪ್ರಶಸ್ತಿಗಳಲ್ಲಿ ಶಾ. ಬಾಲುರಾವ್ ಅನುವಾದ ಪ್ರಶಸ್ತಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಅದಕ್ಕೆ ಕಾರಣವೇನೆಂದರೆ ಈ ಪ್ರಶಸ್ತಿಯನ್ನು ಸ್ಥಾಪನೆ ಮಾಡಿರುವವರು ಶಾ.ಬಾಲುರಾವ್ ಅವರ ಮಡದಿಯಾಗಿರುವ ಕಮಲಿನಿ ಶಾ.ಬಾಲುರಾವ್ ಅವರು. ಕಮಲಿನಿ ಅವರು ಬಿ.ಎಂ.ಶ್ರೀ. ಅವರ ಮೊಮ್ಮಗಳು ಎನ್ನುವುದು ಗಮನಿಸಬೇಕಾದ ಸಂಗತಿ ಎಂದು ಹೇಳಿ ಪ್ರಶಸ್ತಿ ಪುರಸ್ಕೃತರ, ವೇದಿಕೆಯಲ್ಲಿದ್ದ ಗಣ್ಯರ ಸಾಧನೆಗಳನ್ನು ಶ್ಲಾಘಿಸಿ ಅಭಿನಂದನೆಗಳನ್ನು ಸಲ್ಲಿಸಿದರು.

ಕೋಶಾಧಿಕಾರಿ ಚಂದ್ರಶೇಖರ್ ನಾದೂರು ಅವರು ಇಡೀ ಕಾರ್ಯಕ್ರಮದ ನಿರೂಪಣೆಯನ್ನು ನಿರ್ವಹಿಸಿ ಕಾರ್ಯಕ್ರಮದ ಕೊನೆಯಲ್ಲಿ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.

ಸಿರಿವಂತರ ಮಹಲುಗಳಲ್ಲಿ
ಬಡವರಿರುವ ಗುಡಿಸಲಲ್ಲಿ
ಬೇಸಾಯದ ಯಂತ್ರಗಳಲ್ಲಿ
ಕೇಳಲಿ ಕೇಳಲಿ
ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ

-ಸು. ರುದ್ರಮೂರ್ತಿ ಶಾಸ್ತ್ರಿ

ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ ರಾಷ್ಟ್ರಕವಿ ಶ್ರೀ ಮಂಜೇಶ್ವರ ಗೋವಿಂದ ಪೈ ದತ್ತಿ, ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ದತ್ತಿ, ರೆವರೆಂಡ್ ಚೆನ್ನಪ್ಪ ದಾನಿ ಯೆಲ್ಲಪ್ಪ ಉತ್ತಂಗಿ ದತ್ತಿ, ಶ್ರೀ ಕೃಷ್ಣಮೂರ್ತಿ ಪುರಾಣಿಕ ದತ್ತಿಗಳ ಆಶ್ರಯದಲ್ಲಿ ಕವನ ವಾಚನ ಸ್ಪರ್ಧೆ – ೩೧.೧೦.೨೦೨೬ ಶನಿವಾರ ಬೆಳಗ್ಗೆ ೧೦.೩೦ ಗಂಟೆಗೆ

೧೦ ರಿಂದ ೧೬ ವರ್ಷ ವಯಸ್ಸಿನವರಿಗೆ ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಕವನ ವಾಚನ ಸ್ಪರ್ಧೆ

ಉದ್ಘಾಟನೆ: **ಶ್ರೀ ಕೆ. ಮೋಹನ್‌ದೇವ್ ಆಳ್ವ**

ಅಧ್ಯಕ್ಷತೆ: **ಡಾ. ಬೈರಮಂಗಲ ರಾಮೇಗೌಡ**

ಸಹಕಾರ: **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ದ.ರಾ. ಬೇಂದ್ರೆ, ಗೋವಿಂದ ಪೈ, ಕೃಷ್ಣಮೂರ್ತಿ ಪುರಾಣಿಕ ಅವರು ರಚಿಸಿರುವ ಕವಿತೆಗಳನ್ನು ಸ್ಪರ್ಧಿಗಳು ವಾಚನ ಮಾಡುವ ಸ್ಪರ್ಧೆ ನಡೆಸಲಾಯಿತು. ಈ ಸ್ಪರ್ಧೆಗೆ ಕು. ಭವ್ಯ "ಮಹಾಗಣಪತಿಂ ಮನಸಾ" ಪ್ರಾರ್ಥನೆ ಗೀತೆ ಹಾಡಿ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಗೌರವ ಕಾರ್ಯದರ್ಶಿ ಡಾ.ಶಾಂತರಾಜು ಬಂದಿರುವ ಸ್ಪರ್ಧಿಗಳಿಗೆ ಸೂಚನೆಗಳನ್ನು ಕೊಟ್ಟು, ಇವತ್ತಿನ ಕಾರ್ಯಕ್ರಮ ಶ್ರೀಯುತ ಮೋಹನ್‌ದೇವ್ ಆಳ್ವ ಅವರ ಬಹು ನಿರೀಕ್ಷೆಯ ಕಾರ್ಯಕ್ರಮ. ಇವರು ಬಿ.ಎಂ.ಶ್ರೀ.ಪ್ರತಿಷ್ಠಾನದ ಪೋಷಕರು, ಆಧಾರಸ್ತಂಭ ಎಂದರೆ ತಪ್ಪಾಗಲಾರದು. ನಮ್ಮಲ್ಲಿ ನಡೆಯುವ ಬಹುಮಟ್ಟಿನ ಕಾರ್ಯಕ್ರಮಗಳಿಗೆ ಆರ್ಥಿಕ ಬೆಂಬಲವನ್ನು ನೀಡುತ್ತಿದ್ದಾರೆ. ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಕಿರಿಯ ಹಿರಿಯ ಪೀಳಿಗೆಯವರಿಗೆ ವರ್ಷಕ್ಕೆ ಎಂಟು ವಿವಿಧ ರೀತಿಯ ಸ್ಪರ್ಧೆಗಳನ್ನು ನಡೆಸುವಂತಹ ದತ್ತಿಗಳನ್ನು ಇರಿಸಿದ್ದಾರೆ ಎಂದು ಹೇಳಿ ಗೌರವದಿಂದ ಸ್ವಾಗತಿಸಿ ತೀರ್ಪುಗಾರರಾಗಿ ಆಗಮಿಸಿದ್ದ ಡಾ. ಕೆ.ಸಿ. ಶಿವರಾಮಯ್ಯ, ಡಾ. ಎನ್.ಸಿ. ಮಹೇಶ್ ಅವರನ್ನು, ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

ಮೋಹನ್‌ದೇವ್ ಆಳ್ವ ಅವರು ದೀಪ ಬೆಳಗಿಸಿ ಸ್ಪರ್ಧೆಗೆ ಚಾಲನೆ ನೀಡಿ, "ಬಿ.ಎಂ.ಶ್ರೀ.ಯವರನ್ನು, ಎಂ.ವಿ. ಸೀತಾರಾಮಯ್ಯ ಅವರನ್ನು ಅತ್ಯಂತ ಗೌರವದಿಂದ ಸ್ಮರಿಸಿಕೊಳ್ಳುತ್ತೇನೆ. ದ.ರಾ. ಬೇಂದ್ರೆ, ಗೋವಿಂದ ಪೈ, ಕೃಷ್ಣಮೂರ್ತಿ ಪುರಾಣಿಕ ಕನ್ನಡನಾಡಿನಲ್ಲಿ ಜನಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮಹನೀಯರು. ಇಂತಹ ಮಹನೀಯರನ್ನು ಪಡೆದದ್ದು ನಮ್ಮ ಪುಣ್ಯ" ಎನ್ನುತ್ತಾ ಸ್ಪರ್ಧಿಗಳಿಗೆ ಶುಭ ಹಾರೈಸಿದರು. ಡಾ. ಕೆ.ಸಿ. ಶಿವರಾಮಯ್ಯ ಅವರು ಸ್ಪರ್ಧಿಗಳಿಗೆ ಸೂಚನೆ ನೀಡುತ್ತಾ ಸ್ಪರ್ಧಿಗಳು ನಮ್ಮ ನಾಡು ಕಂಡ ಶ್ರೇಷ್ಠ ಕವಿಗಳ ಕವಿತೆಗಳನ್ನು ಎಷ್ಟು ಸ್ಪಷ್ಟವಾಗಿ ವಾಚನ ಮಾಡುತ್ತೀರಿ ಎನ್ನುವುದೇ ಈ ಸ್ಪರ್ಧೆಯ ಮುಖ್ಯ ಉದ್ದೇಶ. ಕನ್ನಡ ಸಾಹಿತ್ಯವನ್ನು ತುಂಬಾ ಚೆನ್ನಾಗಿ ಹೀರಿಕೊಂಡು ದಷ್ಟಪುಷ್ಟವಾಗಿ ನೀವೆಲ್ಲ ಬೆಳೆಯಬೇಕು ಎನ್ನುತ್ತಾ ಶುಭ ಹಾರೈಸಿದರು. ನಂತರ ೪೦ ಸ್ಪರ್ಧಿಗಳು ತಾವು ಆಯ್ಕೆ ಮಾಡಿಕೊಂಡ ಕವನಗಳನ್ನು ವಾಚನ ಮಾಡಿದರು. ಎಲ್ಲರೂ ಊಟ ಮಾಡಿದ ನಂತರ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಿತು. ಅದಕ್ಕೂ ಮೊದಲು ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ ಅವರು ಮಾತನಾಡುತ್ತಾ ದ.ರಾ. ಬೇಂದ್ರೆ, ಗೋವಿಂದ ಪೈ, ಕೃಷ್ಣಮೂರ್ತಿ ಪುರಾಣಿಕ ಅಂತಹ ಕನ್ನಡ ಕವಿಗಳು ಕನ್ನಡ ಸಾಹಿತ್ಯಕ್ಕೆ ತಮ್ಮ ಬರವಣಿಗೆಯ ಮೂಲಕ ಎಷ್ಟು ಮಹತ್ವಪೂರ್ಣವಾದ ಕೊಡುಗೆಯನ್ನು ಕೊಟ್ಟಿದ್ದಾರೆ ಎಂಬುದನ್ನು ಯುವಪೀಳಿಗೆಯವರಿಗೆ ತಲುಪಿಸಬೇಕು. ಆ ನಿಟ್ಟಿನಲ್ಲಿ ಈ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಅದಕ್ಕೆ ವಾಚನ ಮಾಡಲು ಒಂದು ಕವಿತೆಯನ್ನು ನೀವು ಆಯ್ಕೆ ಮಾಡಿಕೊಳ್ಳುತ್ತೀರಿ, ವಾಚಿಸುವ ಕಾರಣ ಅದನ್ನು ಹಲವು ಬಾರಿ ಓದಿಕೊಳ್ಳುತ್ತೀರಿ, ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿರುತ್ತೀರಿ ಎಂದು ತಮ್ಮ ಅಧ್ಯಕ್ಷೀಯ ನುಡಿಗಳನ್ನಾಡಿ, ಭಾಗವಹಿಸಿದ್ದ ಎಲ್ಲಾ ಸ್ಪರ್ಧಿಗಳಿಗೆ ಶುಭ ಹಾರೈಸಿ ಬಹುಮಾನ ವಿಜೇತರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ವಿಜೇತರಾದ ಒಟ್ಟು ಹತ್ತು ಸ್ಪರ್ಧಿಗಳಿಗೆ ನಗದು ಬಹುಮಾನವನ್ನು ಮೋಹನ್‌ದೇವ್ ಆಳ್ವ ಅವರು ಪ್ರದಾನ ಮಾಡಿದರು. ಬಿ.ಎಂ.ಶ್ರೀ. ಪ್ರತಿಷ್ಠಾನದ ವತಿಯಿಂದ ಭಾಗವಹಿಸಿದ್ದ ಎಲ್ಲಾ ಸ್ಪರ್ಧಿಗಳಿಗೆ ಪ್ರೋತ್ಸಾಹದಾಯಕವಾಗಿ ಒಂದೊಂದು ಪುಸ್ತಕವನ್ನು ಕೊಡುಗೆಯಾಗಿ ನೀಡಲಾಯಿತು.





HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 31-10-2026

ಪ್ರಸ್ತುತ ತಿಂಗಳ ಅಂಗಳ

ಕಾರ್ಯಕ್ರಮಗಳು

(ಅನಿವಾರ್ಯ ಸಂದರ್ಭಗಳಲ್ಲಿ ಕೆಳಕಾಣಿಸಿದ
ಯಾವುದೇ ಕಾರ್ಯಕ್ರಮದ ದಿನಾಂಕ ಬದಲಾಗಬಹುದು)

೦೧.೧೧.೨೦೨೬ ಭಾನುವಾರ ಬೆಳಗ್ಗೆ ೯.೩೦ ಗಂಟೆಗೆ
ನಾಡ ಧ್ವಜಾರೋಹಣ ಕಾರ್ಯಕ್ರಮ

೦೪.೧೧.೨೦೨೬ ಬುಧವಾರ ಸಂಜೆ ೫.೦೦ ಗಂಟೆಗೆ
ವಿ. ರಾಣಿ ಗೋವಿಂದರಾಜು ದತ್ತಿ ಪ್ರಶಸ್ತಿ ಕಾರ್ಯಕ್ರಮ
ಪ್ರಶಸ್ತಿ ಪ್ರದಾನ ಮಾಡುವವರು : ಶ್ರೀ ವ.ಚ. ಚನ್ನೇಗೌಡ
ಕನ್ನಡ ಪರ ಚಿಂತಕರು ಹಾಗೂ ಹೋರಾಟಗಾರರು
ಪ್ರಶಸ್ತಿ ಪುರಸ್ಕೃತರು : ಶ್ರೀ ಎಂ. ತಿಮ್ಮಯ್ಯ, ಕನ್ನಡ ಪರ ಹೋರಾಟಗಾರರು

೧೮.೧೧.೨೦೨೬ ಬುಧವಾರ ಸಂಜೆ ೫.೦೦ ಗಂಟೆಗೆ
ಸರ್ ಸಿ.ವಿ. ರಾಮನ್ ವಿಜ್ಞಾನ ದತ್ತಿ ಉಪನ್ಯಾಸ
ವಿಷಯ : ಸುಸ್ಥಿರ ಭವಿಷ್ಯಕ್ಕಾಗಿ ನಾಳಿನ ತಂತ್ರಜ್ಞಾನಗಳು
ವಿಚಾರ ಮಂಡನೆ : ಪ್ರೊ. ಗುರುರಾಜ್ ಎಸ್. ದಾವಣಗೆರೆ
ವಿಜ್ಞಾನ ಲೇಖಕರು

೨೭.೧೧.೨೦೨೬ ಶುಕ್ರವಾರ ಸಂಜೆ ೫.೦೦ ಗಂಟೆಗೆ
ತೀ.ನಂ.ಶ್ರೀ. ಕುರಿತು ವಿಶೇಷ ಉಪನ್ಯಾಸ
ವಿಷಯ : ತೀ.ನಂ.ಶ್ರೀ. ಅವರ ಸೃಜನಶೀಲ ಬರಹಗಳು
ವಿಚಾರ ಮಂಡನೆ : ಡಾ. ಎಚ್.ಎಸ್. ಸತ್ಯನಾರಾಯಣ
ಕನ್ನಡ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಕ್ಕಮಗಳೂರು

Printed & Published by : BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004. Editor : **Dr. S.L. Manjunath**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
ಬಿ.ಎಂ.ಶ್ರೀ. ಪ್ರತಿಷ್ಠಾನ
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ಏನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೪೨೨೪೧೧೨೨